**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿಯವರ ನ್ಯಾಯಾಲಯ, ಪೊನ್ನಂಪೇಟೆ.**

**ಕ್ರಿ.ಮೊ.ಸಂಖ್ಯೆ:898/2020**

**ಪಿರ್ಯಾದುದಾರರು:** : ರಾಜ್ಯ ಸರ್ಕಾರ,
ಉಪವಲಯಾರಣ್ಯಾಧಿಕಾರಿ,
ಕಲ್ಲಹಳ್ಳ ಶಾಖೆ,

**ವಿರುದ್ಧ**

**ಆರೋಪಿಗಳು:**

1. ಶ್ರೀ ಎಮ್.ಎಮ್.ಸಂತೋಷ,
ತಂದೆ: ಎಮ್‌ವಿ.ಮಣಿ,
ಪ್ರಾಯ: 37 ವರ್ಷ,
ವಾಸ: ನಿಟ್ಟೂರು ಗ್ರಾಮ, ಬಾಳೆಲೆ ಹೋಬಳಿ, ವಿರಾಜಪೇಟೆ ತಾಲ್ಲೂಕು,
ಮಡಿಕೇರಿ ಜಿಲ್ಲೆ.

2. ಶ್ರೀ ಕಾಂಡೇರ ಶಶಿ @ ಶಶಿಕುಮಾರ್ ಕೆ.ಎಸ್,
ತಂದೆ: ಅಪ್ಪಯ್ಯ, ಪ್ರಾಯ: 40 ವರ್ಷ,
ವಾಸ: ಸುಳುಗೋಡು ಗ್ರಾಮ,
ಬಾಳೆಲೆ ಹೋಬಳಿ, ವಿರಾಜಪೇಟೆ ತಾಲ್ಲೂಕು.

3. ಶ್ರೀ ಕೆ.ಪಿ.ಉತ್ತಪ್ಪ @ ಕಾಂಡೇರ ಶರಣು,
ತಂದೆ: ಕೆ.ಎಂ.ಪೂವಯ್ಯ,
ಪ್ರಾಯ: 41 ವರ್ಷ,
ವಾಸ: ಸುಳುಗೋಡು ಗ್ರಾಮ,
ಬಾಳೆಲೆ ಹೋಬಳಿ, ವಿರಾಜಪೇಟೆ ತಾಲ್ಲೂಕು.

4. ಶ್ರೀ ಹೊಟ್ಟಂಗಡ ರಂಜು (ರಂಜಿತ್) @ ಬಿದ್ದಪ್ಪ ಎ.ಬಿ, ತಂದೆ: ಪೌತಿ ಬಾಲ,
ಪ್ರಾಯ: 30 ವರ್ಷ,
ವಾಸ: ನಿಟ್ಟೂರು ಗ್ರಾಮ, (ಸ್ವಾವರೆ),
ಬಾಳೆಲೆ ಹೋಬಳಿ, ವಿರಾಜಪೇಟೆ ತಾಲ್ಲೂಕು.

5. ಶ್ರೀ ಕುದೇನಕೊಡಿ ಕೆ.ಎಸ್ ರಾಜ @ ಗೋಪಾಲ, ತಂದೆ: ಸುಬ್ಬಯ್ಯ,
ವಾಸ: ನಿಟ್ಟೂರು ಗ್ರಾಮ (ಜಾಗಲೆ)
ಬಾಳೆಲೆ ಹೋಬಳಿ, ವಿರಾಜಪೇಟೆ ತಾಲ್ಲೂಕು,
ಮಡಿಕೇರಿ ಜಿಲ್ಲೆ.

**ದಂಡ ಪ್ರಕ್ರಿಯೆ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಗಳ ಹೇಳಿಕೆ**

**ಪ್ರಶ್ನೆ ಸಂಖ್ಯೆ - 1** : ಇದುವರೆವಿಗೂ ಅಭಿಯೋಜನೆ ಪರ ಸಾಕ್ಷ್ಯ ನುಡಿದ ಸಾಕ್ಷಿಗಳ ಸಾಕ್ಷ್ಯವನ್ನು ಆಲಿಸಿದ್ದೀರಾ?

ಓದು

**ಪ್ರಶ್ನೆ ಸಂಖ್ಯೆ - 2.** ಪ್ರಾ.ಸಾ.1/ಚಾ.ಸಾ.1 ಮುಜಾಮಿಲ್ ಮುಬಾರಕ್ ಪಕಾಲಿ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿನಾಂಕಃ- 25.08.2020ರಂದು ಮಧ್ಯಾಹ್ನ 11.30ಕ್ಕೆ ಕಟ್ಟೆಕೆರೆ ನಿವಾಸಿಗಳು ದೂರವಾಣಿ ಮೂಲಕ ಹುಲಿ ಸತ್ತಿದೆ ಎಂಬ ಮಾಹಿತಿ ನೀಡಿರುತ್ತಾರೆ. ನಂತರ ತಾನು 12.30ಕ್ಕೆ ಸ್ಥಳಕ್ಕೆ ಹೋಗಿ ನೋಡಿದಾಗ ಮೃತ ಹುಲಿಯ ದೇಹ ಬಿದ್ದಿದ್ದು ಅದರ ನಾಲ್ಕು ಕಾಲುಗಳನ್ನು ಯಾರೋ ಕಡಿದುಕೊಂಡು ಹೋಗಿರುವುದು ಕಂಡು ಬಂದಿರುತ್ತದೆ, ನಂತರ ತಾನು ಚಾಸಾ 2 ರವರಿಗೆ ದೂರವಾಣಿ ಕರೆ ಮಾಡಿ ತಿಳಿಸಿರುತ್ತೇನೆ. ಮೇಲಾಧಿಕಾರಿಗಳು ಸ್ಥಳಕ್ಕೆ ಬಂದಿರುತ್ತಾರೆ. ಆ ದಿನ ಸಂಜೆ ಆಗಿದ್ದ ಕಾರಣ ಮರಣೋತ್ತರ ಪರೀಕ್ಷೆ ಮಾಡಲಾಗಲಿಲ್ಲ. ಆದ ಕಾರಣ ತನ್ನನ್ನು ರಾತ್ರಿ ಕಾವಲಿಗೆ ನಿಲ್ಲಿಸಿರುತ್ತಾರೆ. ಮರುದಿನ ತಾನು, ಚಾಸಾ 20, 2, 3 ಹಾಗೂ ಬಂಡೀಪುರದಿಂದ ಶ್ವಾನ ದಳದ ರಾಣ ಬಂದಿರುತ್ತದೆ. ಬೆಳಗ್ಗೆ 7.30ಕ್ಕೆ ಹುಲಿ ಮೃತವಾಗಿದ್ದ ಸ್ಥಳಕ್ಕೆ ಹೋಗಿರುತ್ತೇವೆ. ಸದರಿ ಶ್ವಾನ ದಳ ವಾಸನೆ ಹಿಡಿದು ಹುಲಿ ಮೃತವಾದ ಸ್ಥಳದಿಂದ ತಟ್ಟೇಕರೆ ಗ್ರಾಮಕ್ಕೆ ಹೋಗಿರುತ್ತದೆ. ಅಲ್ಲಿ 1ನೇ ಆರೋಪಿಯಾದ (ಸಂತೋಷ್ ಎಂ ಎಂ) ತಮ್ಮ ಮನೆಗೆ ಸದರಿ ಶ್ವಾನ ವಾಸನೆ ಹಿಡಿದು ಬಂದಿರುತ್ತದೆ. ಆಗ ನಾವು ಸ್ಥಳೀಯರಾದ ಚಾಸಾ 4 ಹಾಗೂ ಪೊನ್ನಂಪೇಟೆ ಮಹಿಳಾ ಸಿಬ್ಬಂದಿಯೊಂದಿಗೆ ತಮ್ಮ ಮನೆಗೆ ಬಂದಾಗ 1ನೇ ಆರೋಪಿಯಾದ ನೀವು ಹಾಗೂ ನಿಮ್ಮ ಪತ್ನಿ ಇದ್ದು, ನಿಮ್ಮನ್ನು ನೋಡಿ ಗುರುತಿಸಿರುತ್ತಾರೆ. 1ನೇ ಆರೋಪಿಯಾದ ತಮ್ಮ ಮನೆಯನ್ನು ಪರಿಶೀಲಿಸಿದಾಗ ಮಂಚದ ಕೆಳೆಗೆ ಒಂದು ಸ್ಟೀಲ್ ಪಾತ್ರೆಯಲ್ಲಿ ಹಸಿ ಮಾಂಸ ಕಂಡುಬಂದಿರುತ್ತದೆ. ಅಡಿಗೆ ಮನೆಯಲ್ಲಿ ಕುಕ್ಕರ್ ನಲ್ಲಿ 100 ಗ್ರಾಂ ನಷ್ಟು ಮಾಂಸವನ್ನು ಬೇಯಿಸಿರುವುದು ಕಂಡು ಬಂದಿರುತ್ತದೆ. ಮನೆಯ ಅಟ್ಟವನ್ನು ಪರಿಶೀಲಿಸಿದಾಗ ಜಿಂಕೆಯ 3 ಗೊರಸು ಕಂಡುಬಂದಿರುತ್ತದೆ. ಒಂದು ಸ್ಟೀಲ್ ಲೋಟದಲ್ಲಿ ಮೂಳೆಗಳು ಹಾಗೂ ಸಣ್ಣ ಸಣ್ಣ ಪ್ಲಾಸ್ಟಿಕ್ ವೈಯರ್ ನ ತುಂಡುಗಳು, ಪ್ಲಾಸ್ಟಿಕ್ ಚೀಲದಲ್ಲಿ ಸುಮಾರು 300 ಗ್ರಾಂ ನಷ್ಟು ಚಿಲ್ಸ್ ಇರುತ್ತವೆ. ಈ ಬಗ್ಗೆ 1ನೇ ಆರೋಪಿಯಾದ ತಮ್ಮನ್ನು ವಿಚಾರಿಸಿದಾಗ ನೀವು ಸರಿಯಾಗಿ ಉತ್ತರಿಸಿರುವುದಿಲ್ಲ ನಂತರ ಕೋಳಿ ಸಾಕಾಣೆ ಮಾಡುವ ಸ್ಥಳದಲ್ಲಿ ಪರಿಶೀಲಿಸಿದಾಗ ಒಂದು ಮಾಂಸ ಕತ್ತರಿಸುವ ಕತ್ತಿ ಕಂಡುಬಂದಿರುತ್ತದೆ. ಸದರಿ ಮಾಂಸ ಮೇಲ್ನೋಟಕ್ಕೆ ಜಿಂಕೆ ಮಾಂಸದ ರೀತಿ ಕಂಡುಬಂದಿರುತ್ತದೆ. 1ನೇ ಆರೋಪಿಯಾದ ನೀವು ಈ ಬಗ್ಗೆ ಯಾವುದೇ ಉತ್ತರ ನೀಡಿರುವುದಿಲ್ಲ. ಆದ ಕಾರಣ ಕಲ್ಲಹಳ್ಳ ವಲಯ ಅರಣ್ಯ ಅಧಿಕಾರಿಗೆ ಮಾಹಿತಿ ನೀಡಿ ಪ್ರಕರಣ ದಾಖಲಿಸಿ 1ನೇ

ಆರೋಪಿಯಾದ ತಮ್ಮನ್ನು ಕರೆತಂದು ಅರಣ್ಯ ಅಧಿಕಾರಿ ಮುಂದೆ ಹಾಜರುಪಡಿಸಿರುತ್ತಾರೆ. ಮೇಲೆ ಹೇಳಿದ ಮಾಂಸ, ಚಿಲ್ಸ್ ಹಾಗೂ ಮೂಳೆಗಳನ್ನು ಮಹಜರ್ ಮಾಡಿ ಅಮಾನತ್ತು ಪಡಿಸಿರುತ್ತೇನೆ ಎಂದು ಸಾಕ್ಷ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಬಯಸುವಿರಿ?

ಉಃ ಸುಳ್ಳು

**ಪ್ರಶ್ನೆ ಸಂಖ್ಯೆ - 3.** ಪ್ರಾ.ಸಾ.1/ಚಾ.ಸಾ.1 ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿಃ27.08.2020ರಂದು ತಾನೂ, ಶ್ರೀಮತಿ ತೀರ್ಥ, ವಲಯ ಅರಣ್ಯ ಅಧಿಕಾರಿ ಪೊನ್ನಂಪೇಟೆ, ಗಿರೀಶ್ ಪಿ ಚೌಗಲೆ, ಚಂಗಪ್ಪ, ಬಸಪ್ಪ ನಾಯಕುಡಿ, ಕೆ ಮಹೇಶ್ ಅರಣ್ಯ ವೀಕ್ಷಕರು ಬೆಳಗ್ಗೆ 6.30ಕ್ಕೆ ವಿರಾಜಪೇಟೆ ತಾಲ್ಲೂಕು ಬಾಳೆಲೆ ಹೋಬಳಿ ಸುಳುಗೋಡು ಗ್ರಾಮಕ್ಕೆ 2ನೇ ಆರೋಪಿಯಾದ ಕಾಂಡೇರ ಶಶಿಕುಮಾರ್ ರವರ ಮನೆಗೆ ಹೋಗಿರುತ್ತೇವೆ. ಮನೆಯಲ್ಲಿದ್ದ ಮಹಿಳೆಯರು ಹಾಗೂ ಸಣ್ಣ ಮಕ್ಕಳನ್ನು ಹೊರಗೆ ಕಳುಹಿಸಿ ಶೋಧನಾ ಕಾರ್ಯ ಪ್ರಾರಂಭಿಸಿರುತ್ತಾರೆ. ಒಂದು ಕೊಠಡಿಯಲ್ಲಿ ಸೂಟ್ ಕೇಸ್ ನಲ್ಲಿ 2 ಜೀವಂತ ಕಾಡು ತೂಸು ಇರುತ್ತವೆ. 2ನೇ ಆರೋಪಿ ಸಹೋದರನಿಗೆ ಈ ಬಗ್ಗೆ ಕೇಳಿದಾಗ ಅವರು ಸದರಿ ಕಾಡುತೂಸು ಬಗ್ಗೆ ತನಗೆ ಗೊತ್ತಿಲ್ಲ ಅದು ನನ್ನ ಸಹೋದರನಿಗೆ ಸೇರಿದ್ದು ಎಂದು ತಿಳಿಸಿರುತ್ತಾರೆ. ಮುಂದುವರಿದು 2ನೇ ಆರೋಪಿಯಾದ ನೀವು ಬೆಂಗಳೂರಿಗೆ ಹೋಗಿರುವುದಾಗಿ ತಿಳಿಸಿರುತ್ತಾರೆ. 1ನೇ ಆರೋಪಿಯಾದ ತಮ್ಮಿಂದ ಅಮಾನತ್ತುಪಡಿಸಿದ ಜಿಂಕೆ ದೇಹವನ್ನು ಪಶುವೈದ್ಯಾಧಿಕಾರಿಯಿಂದ ಪರಿಶೀಲನೆಗೆ ಒಳಪಡಿಸಿರುತ್ತಾರೆ. ದಿಃ 02.09.2020ರಂದು 2ನೇ ಆರೋಪಿಯಾದ ತಮ್ಮನ್ನು ವಲಯ ಅರಣ್ಯ ಅಧಿಕಾರಿ ಕಲ್ಲಹಳ್ಳರವರು ಆನೆ ಚೌಕೂರು ಅರಣ್ಯ ಪ್ರದೇಶಕ್ಕೆ ಕರೆದುಕೊಂಡು ಬಂದು ದಸ್ತಗಿರಿ ಕ್ರಮ ಜರುಗಿಸಿ ನ್ಯಾಯಾಲಯದ ಮುಂದೆ ಹಾಜುರಪಡಿಸಿರುತ್ತಾರೆ. ಆನಂತರ ಪೊಲೀಸ್ ಕಸ್ಟಡಿಗೆ 2ನೇ ಆರೋಪಿಯಾದ ತಮ್ಮನ್ನು ತೆಗೆದುಕೊಂಡು ತಮ್ಮ ಸ್ವಇಚ್ಚಾ ಹೇಳಿಕೆ ಪಡೆದುಕೊಂಡಿರುತ್ತಾರೆ. ಇದಕ್ಕೆ ನೀವು ಏನು ಹೇಳಬಯಸುವಿರಿ?

ಉಃ ಸುಳ್ಳು

**ಪ್ರಶ್ನೆ ಸಂಖ್ಯೆ - 4.** ಪ್ರಾ.ಸಾ.1/ಚಾ.ಸಾ.1 ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿನಾಂಕ 03.09.2020ರಂದು ತಾನು ಮತ್ತು ತಮ್ಮ ಸಿಬ್ಬಂದಿಗಳಾದ ವಿಲಾಸ್ ಪವರ್, ಸಮೀರ್ ಅಹಮದ್, ಸ್ವಯಂ ಸೇವಕರಾದ ಚಾಸಾ 13 ಮತ್ತು 14ರವರು ಸೇರಿ 2ನೇ ಆರೋಪಿಯಾದ ತಮ್ಮನ್ನು ತಮ್ಮ ಮನೆಗೆ ಕರೆದುಕೊಂಡು ಹೋದಾಗ ನೀವು ಕೃತ್ಯಕ್ಕೆ ಬಳಸಿದ ಗನ್, 5 ಖಾಲಿ ಕಾಡು ತೂಸು, 3 ಜೀವಂತ ಕಾಡುತೂಸು, ಹಾಗೂ ಪರವಾನಿಗೆಯನ್ನು ಹಾಜರುಪಡಿಸಿರುತ್ತೀರಿ 3 ಜೀವಂತ ಕಾಡುತೂಸುಗಳಲ್ಲಿ 2 ಫ್ಯಾಕ್ಟರಿ ಮೇಡ್ ಮತ್ತು ಕಂಟ್ರಿ ಮೇಡ್ ಆಗಿರುತ್ತದೆ. 2ನೇ ಆರೋಪಿಯಾದ ನೀವು ಈ ಪ್ರಕರಣಕ್ಕಿಂತ 10 ದಿನಗಳ ಮುಂಚೆ ಒಂದು ಕೆಂದಳಿಲನ್ನು ಹೊಡೆದು ಮನೆಯ ಹಿಂದೆ ಮುಚ್ಚಿಟ್ಟಿರುತ್ತೀರಿ. ತಾವು ಪರಿಶೀಲಿಸಿದಾಗ ಕೆಂದಳಿಲಿನ ಚರ್ಮದ ಕೂದಲು ಮತ್ತು ಇತರೆ ಪರಿಕರಗಳು ಸಿಕ್ಕಿರುತ್ತವೆ. ಅವುಗಳನ್ನು ಮಹಜರ್ ಮಾಡಿ ಸದರಿ ವಸ್ತುಗಳನ್ನು

ಅಮಾನತ್ತುಪಡಿಸಿಕೊಂಡಿರುತ್ತಾರೆ. ದಿನಾಂಕ 03.09.2020 2 ರಿಂದ 4ನೇ ಆರೋಪಿಗಳಾದ ನಿಮ್ಮನ್ನು ಕೃತ್ಯ ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತಾರೆ. ಆರೋಪಿಗಾದ ನೀವುಗಳು ಹುಲಿಗೆ ಗುಂಡು ಹಾರಿಸಿದ ಸ್ಥಳವನ್ನು ಹಾಗೂ ಹುಲಿ ಮೃತವಾದ ಸ್ಥಳವನ್ನು ತೋರಿಸಿರುತ್ತೀರಿ. ಹುಲಿಯ ಕಾಲುಗಳನ್ನು ಕತ್ತರಿಸಿದ ಸ್ಥಳ ಹಾಗೂ, ಹುಲಿಯ ಕಾಲುಗಳಿಂದ ಬೆರಳು ಸಮೇತ ಉಗುರುಗಳನ್ನು ತೆಗೆದ ಸ್ಥಳವನ್ನು ತೋರಿಸಿರುತ್ತೀರೆಂದು ಮತ್ತು ಆರೋಪಿತರಾದ ನೀವುಗಳು ನೀಡಿದ ಸ್ವ ಇಚ್ಛೆ ಹೇಳಿಕೆಗೂ ಮತ್ತು ತಾವು ತೋರಿಸಿದ ಸ್ಥಳಕ್ಕೂ ಹೋಲಿಕೆ ಆಗಿರುತ್ತದೆ. ಸ್ಥಳ ಮಹಜರ್ ಅನ್ನು ಮಾಡಿರುತ್ತಾರೆ, ಅದೇ ದಿನ ಸಂಜೆ 5 ಗಂಟೆಗೆ ಬಾತ್ಮಿದಾರರ ಮಾಹಿತಿಯಂತೆ 5ನೇ ಆರೋಪಿಯಾದ ನೀವು ಮನೆಯಲ್ಲಿ ಇರುವ ವಿಚಾರ ತಿಳಿದು ತಾನು, ಸ್ವಯಂ ಸೇವಕರಾದ ಚಾಸಾ 2, 3, ಚಾಸಾ 13 ಮತ್ತು 14ರವರು ಸೇರಿ 5ನೇ ಆರೋಪಿಯಾದ ತಮ್ಮ ಮನೆಗೆ ಬಂದಾಗ ತಾವು ಮನೆಯಲ್ಲಿ ಇದ್ದು, ತನಿಖಾಧಿಕಾರಿಗಳು ವಿಚಾರಣೆ ಮಾಡಿದಾಗ ದಿನಾಂಕ 24.08.2020ರಂದು 1 ರಿಂದ 4ನೇ ಆರೋಪಿಗಳ ಜೊತೆಗೆ ಸೇರಿ ಅರಣ್ಯಕ್ಕೆ ಅಕ್ರಮ ಪ್ರವೇಶ ಮಾಡಿ ಹುಲಿ ಮತ್ತು ಜಿಂಕೆಯನ್ನು ಭೇಟೆಯಾಡಿರುವುದನ್ನು ಒಪ್ಪಿಕೊಂಡಿರುತ್ತೀರಿ. ತನಿಖಾಧಿಕಾರಿಗಳು ಕೃತ್ಯಕ್ಕೆ ಬಳಸಿದ ಆಯುಧಗಳನ್ನು 5ನೇ ಆರೋಪಿಯಾದ ತಮ್ಮನ್ನು ತೋರಿಸಲು ಕೇಳಿದಾಗ ಒಂದು ಸ್ಟೀಲ್ ಬ್ಯಾಟರಿಯನ್ನು ಹಾಗೂ ತಮ್ಮ ಜೇಬಿನಲ್ಲಿ ಪ್ಲಾಸ್ಟಿಕ್ ಕವರ್ನಲ್ಲಿ ಇದ್ದ ಹುಲಿಯಿಂದ ಬೇರ್ಪಡಿಸಿದ್ದ 2ಉಗುರುಗಳನ್ನು ತೋರಿಸಿರುತ್ತೀರಿ. ತನಿಖಾಧಿಕಾರಿಗಳು ಮಹಜರ್ ಮಾಡಿ ಸದರಿ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡು. 5ನೇ ಆರೋಪಿಯಾದ ತಮ್ಮನ್ನು ದಸ್ತಗಿರಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಬಯಸುವಿರಿ?

ಉಃ ಸುಳ್ಳು

**<u>ಪ್ರಶ್ನೆ ಸಂಖ್ಯೆ - 5.</u>** ಪ್ರಾ.ಸಾ.1/ಚಾ.ಸಾ.1 ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿನಾಂಕ 04.09.2020ರಂದು 2 ರಿಂದ 5ನೇ ಆರೋಪಿಗಳಾದ ತಮ್ಮ ಹಾಗೂ ತಮ್ಮಿಂದ ಅಮಾನತ್ತುಪಡಿಸಿದ ವಸ್ತುಗಳೊಂದಿಗೆ ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ. ದಿನಾಂಕ 07.09.2020ರಂದು ಅಮಾನತ್ತುಪಡಿಸಿದ ವಸ್ತುಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯ ಬೆಂಗಳೂರು ಮಡಿವಾಳಕ್ಕೆ 22 ಆರ್ಟಿಕಲ್ ಎಂದು ವಿಂಗಡಿಸಿ ಚಾಸಾ 17ರವರ ಮೂಲಕ ಪರೀಕ್ಷೆಗಾಗಿ ಕಳುಹಿಸಿರುತ್ತಾರೆ. 3ನೇ ಮತ್ತು 5ನೇ ಆರೋಪಿಗಳಾದ ನೀವು ತಮ್ಮ ಹೇಳಿಕೆಯಲ್ಲಿ 1ನೇ ಆರೋಪಿಯ ಬಳಿ ಹುಲಿಯ 5 ಉಗುರುಗಳು, ಹಾಗೂ ಹುಲಿಯ ಕೋರೆ ಹಲ್ಲು ಇದೆ ಎಂದು ಮಾಹಿತಿ ನೀಡಿರುತ್ತಾರೆ. ಅದೇ ದಿನ ನ್ಯಾಯಾಲಯದಿಂದ 1ನೇ ಆರೋಪಿಯಾದ ತಮ್ಮನ್ನು ಪೋಲೀಸ್ ಕಸ್ಟಡಿಗೆ ತೆಗೆದುಕೊಂಡಿರುತ್ತಾರೆ. ಆಗ 1ನೇ ಆರೋಪಿಯಾದ ನೀವು ತಮ್ಮ ಮರು ಸ್ವ ಇಚ್ಛೆ ಹೇಳಿಕೆಯಲ್ಲಿ 1 ಹುಲಿಯ 4 ಉಗುರು, ಹಾಗೂ ಹುಲಿಯ ಒಂದು ಕೋರೆ ಹಲ್ಲು ತಮ್ಮ ಬಳಿ ಇದ್ದು ಅವುಗಳನ್ನು ತಮ್ಮ ಮನೆಯ ಸ್ನಾನದ ಮನೆಯಲ್ಲಿ ಮೇಲೆ ಬಚ್ಚಿಟ್ಟಿರುವುದಾಗಿ ತಿಳಿಸಿದಾಗ, ಅದರಂತೆ ನಾವು ದಿನಾಂಕ 25.08.2020ರಂದು 1ನೇ ಆರೋಪಿಯಾದ ತಮ್ಮ ಮನೆಯ ಬಳಿ ಪರಿಶೀಲನೆಗೆ ಹೋಗಿದ್ದಾಗ ಸದರಿ ವಸ್ತುಗಳನ್ನು ಮನೆಯ ಪಕ್ಕದ ಗದ್ದೆಯಲ್ಲಿ ಎಸೆದಿರುವುದಾಗಿ 1 ನೇ ಆರೋಪಿಯಾದ ನೀವು ತಮ್ಮ ಹೇಳಿಕೆಯಲ್ಲಿ ತಿಳಿಸಿರುತ್ತೀರಿ. ಸದರಿ ಹೇಳಿಕೆಯಂತೆ ಆರೋಪಿ 1ರವರು ಮನೆ ಹಾಗೂ ಗದ್ದೆಯ ಬಳಿ

ಪರಿಶೀಲನೆ ಮಾಡಿರುತ್ತೇವೆ. ಆದರೆ ಯಾವುದೇ ಉಗುರು ಹಾಗೂ ಕೋರೆ ಹಲ್ಲು ಪತ್ತೆಯಾಗಿರುವುದಿಲ್ಲ. ಈ ಬಗ್ಗೆ ತನಿಖಾಧಿಕಾರಿಗಳಿಗೆ ತನ್ನ ಹೇಳಿಕೆ ನೀಡಿರುತ್ತೇನೆ ಮತ್ತು 1ನೇ ಆರೋಪಿಯಾದ ತಮ್ಮ ಮನೆಯಲ್ಲಿ ಎರಡು ಪಿಸ್ತೂಲ್‌ನ ಬುಲೆಟ್ ಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

**ಪ್ರಶ್ನೆ ಸಂಖ್ಯೆ -6** ಪ್ರಾ.ಸಾ.2/ಚಾ.ಸಾ.2 ಗಿರೀಶ್ ಚೌಗಲಿ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿನಾಂಕಃ- 26.08.2020ರಂದು ಬೆಳಗ್ಗೆ 7.30ರ ಸಮಯದಲ್ಲಿ ತಾನು ಮತ್ತು ಚಾಸಾ 1, ಚಾ ಸಾ 3 ಶ್ವಾನದಳದೊಂದಿಗೆ ಹುಲಿ ಮೃತಪಟ್ಟಿದ್ದ ಸ್ಥಳಕ್ಕೆ ಹೋಗಿರುತ್ತೇವೆ. ಅಲ್ಲಿಂದ ಶ್ವಾನ ದಳದವರು ವಾಸನೆ ಹಿಡಿಯುತ್ತಾ ಕಾಡಿನ ಮೂಲಕ ಸಿಬ್ಬಂದಿಯೊಂದಿಗೆ ತಪಾಸಣೆ ಮಾಡುತ್ತಾ ನಿಟ್ಟೂರು ಗ್ರಾಮದ ತಟ್ಟೆಕೆರೆ ಹಾಡಿ ಹತ್ತಿರ ಹೋಗಿರುತ್ತೇವೆ. ಶ್ವಾನವು ಸಂತೋಷ್ ಎಂಬುವವರ ಅಂದರೆ 1ನೇ ಆರೋಪಿಯಾದ ತಮ್ಮ ಮನೆಯ ಬಳಿ ತೆರಳಿರುತ್ತದೆ. ಚಾಸಾ 4ರವರನ್ನು ಕರೆಸಿ ಮಹಿಳಾ ಸಿಬ್ಬಂದಿ ಸಹಾಯದಿಂದ ಮನೆ ಶೋಧನೆ ಮಾಡಿದಾಗ ತಮ್ಮ ಮನೆಯ ಮಂಚದ ಕೆಳಗೆ ಒಂದು ಸ್ಟೀಲ್ ಪಾತ್ರೆಯಲ್ಲಿ ಹಸಿ ಮಾಂಸ ಕಂಡುಬಂದಿರುತ್ತದೆ. ಅಡಿಗೆ ಮನೆಯಲ್ಲಿ ಕುಕ್ಕರ್ ನಲ್ಲಿ 100 ಗ್ರಾಂ ನಷ್ಟು ಮಾಂಸವನ್ನು ಬೇಯಿಸಿರುವುದು ಕಂಡು ಬಂದಿರುತ್ತದೆ. ಮನೆಯ ಅಟ್ಟವನ್ನು ಪರಿಶೀಲಿಸಿದಾಗ ಅಲ್ಯುಮಿನಿಯಂ ಪಾತ್ರೆಯಲ್ಲಿ ಜಿಂಕೆಯ 3 ಗೊರಸು ಕಂಡುಬಂದಿರುತ್ತದೆ. ಒಂದು ಸ್ಟೀಲ್ ಲೋಟದಲ್ಲಿ ಮೂಳೆಗಳು ಹಾಗೂ ಸಣ್ಣ ಸಣ್ಣ ಪ್ಲಾಸ್ಟಿಕ್ ವೈಯರ್ ನ ತುಂಡುಗಳು, ಪ್ಲಾಸ್ಟಿಕ್ ಚೀಲದಲ್ಲಿ ಸುಮಾರು 300 ಗ್ರಾಂ ನಷ್ಟು ಚೆಲ್ಸ್ ಇರುತ್ತವೆ. ಈ ಬಗ್ಗೆ 1ನೇ ಆರೋಪಿಯಾದ ತಮ್ಮನ್ನು ವಿಚಾರಿಸಿದಾಗ ನೀವು ಸರಿಯಾಗಿ ಉತ್ತರಿಸಿರುವುದಿಲ್ಲ. ಸದರಿ ಮಾಂಸ ಮೇಲ್ನೋಟಕ್ಕೆ ಜಿಂಕೆ ಮಾಂಸದ ರೀತಿ ಕಂಡುಬಂದಿರುತ್ತದೆ. ಸಂತೋಷ್ ಆರೋಪಿಯಾದ ನೀವು ಈ ಬಗ್ಗೆ ಯಾವುದೇ ಉತ್ತರ ನೀಡಿರುವುದಿಲ್ಲ. ಆದ ಕಾರಣ ಕಲ್ಲಹಳ್ಳ ವಲಯ ಅರಣ್ಯ ಅಧಿಕಾರಿಗೆ ಮಾಹಿತಿ ನೀಡಿ ಪ್ರಕರಣ ದಾಖಲಿಸಿ 1ನೇ ಆರೋಪಿಯಾದ ನಿಮ್ಮನ್ನು ಕರೆತಂದು ಅರಣ್ಯ ಅಧಿಕಾರಿ ಮುಂದೆ ಹಾಜರುಪಡಿಸಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

**ಪ್ರಶ್ನೆ ಸಂಖ್ಯೆ -7** ಪ್ರಾ.ಸಾ.2/ಚಾ.ಸಾ.2 ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ನುಡಿಯುತ್ತಾ, ಮೇಲೆ ಹೇಳಿದ ಮಾಂಸ, ಚೆಲ್ಸ್ ಹಾಗೂ ಮೂಳೆಗಳನ್ನು ಮಹಜರ್ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತಾರೆ. 1ನೇ ಆರೋಪಿಯಾದ ತಮ್ಮನ್ನು ದಸ್ತಗಿರಿ ಮಾಡಿ ನಿಮ್ಮ ಮೊಬೈಲ್ ಅನ್ನು ಅಮಾನತ್ತುಪಡಿಸಿಕೊಂಡು ನಂತರ ಪ್ರಕರಣ ದಾಖಲಿಸಿಕೊಂಡು ಚಾ ಸಾ 20 ರವರ ಮುಂದೆ ಆರೋಪಿಯಾದ ನಿಮ್ಮನ್ನು ಹಾಜರುಪಡಿಸಿರುತ್ತಾರೆ. ಚಾಸಾ 20ರವರು 1ನೇ ಆರೋಪಿಯಾದ ನಿಮ್ಮನ್ನು ವಿಚಾರಿಸಿದಾಗ ಆರೋಪಿ 2 ರಿಂದ 4 ರವರ ಜೊತೆಗೆ ಸೇರಿ ಹುಲಿಗೆ ಗುಂಡು ಹೊಡೆದು ಸಾಯಿಸಿರುವುದಾಗಿ ಮತ್ತು ಸದರಿ ಹುಲಿಯ ಕಾಲನ್ನು ಕತ್ತರಿಸಿ ಹುಲಿಯ ಉಗುರು ಹಾಗೂ ಕೋರೆ ಹಲ್ಲುಗಳನ್ನು ಬೇರ್ಪಡಿಸಿರುವುದಾಗಿ ತಿಳಿಸಿರುತ್ತೀರಿ. 1ನೇ ಆರೋಪಿಯಾದ ತಮ್ಮ ಹೇಳಿಕೆ ಮೇರೆಗೆ ಮರುದಿನ ಬೆಳಗ್ಗೆ 6.30ಕ್ಕೆ

ಚಾಸಾ 7, 5, ಚಾಸಾ 1, ಚಾಸಾ 6, ಮಹೇಶ್ ರವರೊಂದಿಗೆ ಬಾಳೆಲೆಯ ಸುಳುಗೋಡು ಗ್ರಾಮಕ್ಕೆ ಹೋಗಿರುತ್ತಾರೆ. ಆರೋಪಿ 2 ರವರ ಮನೆಗೆ ಹೋಗಿ ಪರಿಶೀಲಿಸಿದಾಗ ಒಂದು ಸೂಟ್ ಕೇಸ್ ನಲ್ಲಿ 2 ಜೀವಂತ ಕಾಡುತೂಸು ಇದ್ದು ಅದನ್ನು ಮಹಜರ್ ಮಾಡಿ ಇಲಾಖಾ ಪರವಾಗಿ ಅಮಾನತ್ತುಪಡಿಸಿರುತ್ತಾರೆ. ಮನೆಯಲ್ಲಿ ಆರೋಪಿ 2 ರವರ ಸಹೋದರ ಇದ್ದು ಅವರನ್ನು ವಿಚಾರಿಸಿದಾಗ ಸದರಿ ಕಾಡುತೂಸು ಆರೋಪಿ 2 ರವರಿಗೆ ಸೇರಿದ್ದು ಎಂದು ತಿಳಿಸಿರುತ್ತಾರೆ. ಮಧ್ಯಾಹ್ನ 12 ಗಂಟೆಗೆ ಅಲ್ಲೆ ಪಕ್ಕದಲ್ಲಿದ್ದ ಆರೋಪಿ 3 ರವರ ಮನೆಗೆ ಶೋಧನೆ ಮಾಡಿದಾಗ ಮನೆಯ ಕೊಠಡಿಯ ಕಬ್ಬಿಣದ ಬೀರುವಿನಲ್ಲಿ 2 ಪ್ಲಾಸ್ಟಿಕ್ ಕವರ್ ನಲ್ಲಿ ಚಿಲ್ಸ್ ದೊರೆತಿರುತ್ತದೆ ಒಂದು ಕೆಂಪು ಬಣ್ಣದ ಖಾಲಿ ಕಾಡತೂಸು ದೊರೆತಿರುತ್ತದೆ. ಮನೆಯ ಪಕ್ಕದ ಕೊಠಡಿಯಲ್ಲಿ ಒಂದು ಮಚ್ಚು ದೊರೆತಿರುತ್ತದೆ ಅಲ್ಲಿಯೆ ಚಿಲ್ಸ್ ಸಹ ದೊರೆತಿರುತ್ತದೆ ವಿಚಾರಣೆ ಮಾಡಿದಾಗ ಅವುಗಳನ್ನು ಶೇಖರಿಸಲು ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿಸಿರುತ್ತಾರೆ. ಮನೆಯ ಕೊಠಡಿಯಲ್ಲಿ ಸ್ವೆಟರ್ ದೊರೆತಿದ್ದು, ಅದನ್ನು ಪರಿಶೀಲಿಸಿದಾಗ ಪ್ರಾಣಿಯ ಕೂದಲು ಇರುವುದು ಕಂಡುಬಂದಿರುತ್ತದೆ. ಶ್ವಾನ ದಳದ ಸಹಾಯದಿಂದ ಮನೆಯ ಸುತ್ತಲು ಪರಿಶೀಲಿಸಿದಾಗ ಪಕ್ಕದ ತೋಟದಲ್ಲಿ ಹೂತಿರುವ ಪ್ಲಾಸ್ಟಿಕ್ ಕವರ್ ಕಾಣಿಸಿತು ಅದನ್ನು ಹಗೆದು ನೋಡಿದಾಗ ಹುಲಿಯ ಕಾಲಿನ ಉಗುರಗಳನ್ನು ಹೊಂದಿರುವ 7 ಮಾಂಸದ ತುಂಡುಗಳು, ಒಂದು ದವಡೆ ಹಲ್ಲಿನ ಮಾಂಸದ ತುಂಡು ದೊರೆತಿರುತ್ತವೆ. ಸದರಿ ವಸ್ತುಗಳನ್ನು ಮಹಜರ್ ಮಾಡಿ ಅಮಾನತ್ತುಪಡಿಸಿ ಚಾಸಾ 20ರವರ ಮುಂದೆ ಹಾಜರುಪಡಿಸಿರುತ್ತಾರೆ, ಅದೇ ದಿನ 1ನೇ ಆರೋಪಿಯಾದ ತಮ್ಮ ಮನೆಯಲ್ಲಿ ಅಮಾನತ್ತುಪಡಿಸಿಕೊಂಡ ಜಿಂಕೆಯ ಮಾಂಸ ಮತ್ತು ಮರಣೋತ್ತರ ಪರೀಕ್ಷೆ ನಡೆಸಿದ ನಂತರ ನ್ಯಾಯಾಲಯದ ಆದೇಶ ಪಡೆದು ಮಾಂಸ ಹಾಗೂ ಕವಣೆಗಳನ್ನು ನಾಶಪಡಿಸಿರುತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

**ಪ್ರಶ್ನೆ ಸಂಖ್ಯೆ -8** ಪ್ರಾ.ಸಾ.2/ಚಾ.ಸಾ.2 ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿನಾಂಕ 01.09.2020ರಂದು ಸಂಜೆ 5.30ರಲ್ಲಿ ಬಾತ್ಮಿದಾರರಿಂದ 2ನೇ ಮತ್ತು 3ನೇ ಆರೋಪಿಗಳಾದ ನೀವುಗಳು ಸೋಮವಾರಪೇಟೆಯ ಗೌಡಳ್ಳಿಗ್ರಾಮದ ಲೈನ್ ಮನೆಯಲ್ಲಿ ಇರುವುದಾಗಿ ಮಾಹಿತಿ ಬಂದಿರುತ್ತದೆ. ತಾನು ಹಾಗೂ ಸಿಬ್ಬಂದಿಗಳು, ಮಹಿಳಾ ಸಿಬ್ಬಂದಿ, ಶನಿವಾರಸಂತೆಯ ಸಿಬ್ಬಂದಿಗಳು ಸೇರಿ ಸ್ಥಳಕ್ಕೆ ಹೋಗಿರುತ್ತೇವೆ. ಆದರೆ 2ನೆ ಮತ್ತು 3ನೇ ಆರೋಪಿಗಳು ಪರಾರಿಯಾಗಿರುತ್ತಾರೆ. ದಿನಾಂಕ 02.09.2020ರಂದು ಗಂಗಾ ಲಾಡ್ಜ್ ಶನಿವಾರಸಂತೆಯಲ್ಲಿ 2ನೇ ಮತ್ತು 3ನೇ ಆರೋಪಿಗಳಾದ ನೀವುಗಳು ಇರುವುದಾಗಿ ಮಾಹಿತಿ ಬಂದಿರುತ್ತದೆ. ತಾವು ಅಲ್ಲಿಗೆ ಹೋಗಿ ಸದರಿ ಲಾಡ್ಜ್ ಹಿಂಭಾಗ ಕಾಫಿ ತೋಟದಲ್ಲಿ ಪರಿಶೀಲಿಸಿದಾಗ 2ನೇ ಆರೋಪಿಯಾದ ನೀವು ಸಿಕ್ಕಿದ್ದು ನಿಮ್ಮನ್ನು ವಶಕ್ಕೆ ಪಡೆದುಕೊಂಡು ತಮ್ಮ ತನಿಖಾಧಿಕಾರಿ ಮುಂದೆ ಆನೆ ಚೌಕೂರಿನಲ್ಲಿ ಬೆಳಗ್ಗೆ 9.30ಕ್ಕೆ ಹಾಜರುಪಡಿಸಿರುತ್ತಾರೆ. ದಿನಾಂಕ 03.09.2020ರಂದು 2ನೇ ರಿಂದ 4ನೇ ಆರೋಪಿಗಳಾದ ನಿಮ್ಮನ್ನು ತಾನು ಮತ್ತು ತನಿಖಾಧಿಕಾರಿ, ಶ್ರೀ ಕೆ ಎಂ ಮಾದಪ್ಪ ಸ್ವಯಂ ಸೇವಕರು, ಶ್ರೀ ವೆಂಕಟ ನಾಯ್ಡು, ಇಲಾಖಾ ಸಿಬ್ಬಂದಿ ಮತ್ತು ಶರಣಪ್ಪ ರವರು ಸೇರಿ ಕೃತ್ಯ ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತೇವೆ.

ಹುಲಿಗೆ ಗುಂಡು ಹೊಡೆದ ಸ್ಥಳ, ಹುಲಿ ಮೃತವಾದ ಸ್ಥಳ, ಹುಲಿಯ ಕಾಲುಗಳನ್ನು ಕತ್ತರಿಸಿದ ಸ್ಥಳ, ಹುಲಿಯ ಉಗುರುಗಳನ್ನು ಬೇರ್ಪಡಿಸಿದ ಸ್ಥಳಗಳನ್ನು ಆರೋಪಿತರಾದ ನೀವುಗಳು ಅವರಿಗೆ ತೋರಿಸಿರುತ್ತೀರಿ ಮತ್ತು ತಾವೇ ಹುಲಿಗೆ ಗುಂಡು ಹೊಡೆದಿರುವುದಾಗಿ ತಿಳಿಸಿರುತ್ತಾರೆ. ಸದರಿ ಆರೋಪಿತರು ನೀಡಿದ ಹೇಳಿಕೆ ಹಾಗೂ ತೋರಿಸಿದ ಸ್ಥಳ ಹಾಗೂ ಕೃತ್ಯ ಸ್ಥಳಗಳಿಗೆ ಒಂದಕ್ಕೊಂದು ಹೋಲಿಕೆ ಆಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

**<u>ಪ್ರಶ್ನೆ ಸಂಖ್ಯೆ-9</u>** ಪ್ರಾ.ಸಾ.2/ಚಾ.ಸಾ.2 ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ನುಡಿಯುತ್ತಾ,

ಅದೇ ದಿನ ಸಂಜೆ 5 ಗಂಟೆಗೆ 5ನೇ ಆರೋಪಿಯಾದ ನೀವು ನಿಟ್ಟೂರು ಗ್ರಾಮದ ಜಾಗಲೆಯಲ್ಲಿ ಇರುವುದಾಗಿ ಮಾಹಿತಿ ಬಂದಿರುತ್ತದೆ. ಆಗ ಚಾಸಾ 1, 3, 13 ಹಾಗೂ ತಾನು ಅಲ್ಲಿಗೆ ಬಂದಾಗ ನೀವು ಮನೆಯಲ್ಲಿ ಇದ್ದು ಈ ಪ್ರಕರಣದ ಬಗ್ಗೆ ಪ್ರಶ್ನೆ ಮಾಡಿದಾಗ ತಾನು ಹಾಗೂ ಆರೋಪಿ 1 ರಿಂದ 4 ರವರು ಸೇರಿ ದಿನಾಂಕ 24.08.2020ರಂದು ಸಂಜೆ 5 ಗಂಟೆಗೆ ತಟ್ಟೆಕೆರೆಯ ಬಕ್ಕಮೂಲೆಯಿಂದ ಅರಣ್ಯವನ್ನು ಪ್ರವೇಶಿಸಿ ಕೃತ್ಯ ಮಾಡಿರುವುದಾಗಿ ತಿಳಿಸಿರುತ್ತೀರಿ, ಸಂಜೆ 6.30ಕ್ಕೆ ಹಡ್ಲು ಎಂಬ ಸ್ಥಳದಲ್ಲಿ ತಾನು ಹುಲಿ ನೋಡಿರುವುದಾಗಿ, 1ನೇ ಬಂದೂಕಿನಿಂದ ಹುಲಿಗೆ ಗುಂಡು ಹಾರಿಸಿರುವುದಾಗಿ ತಿಳಿಸಿರುತ್ತಾರೆ. ಸಮೀಪ ಹೋಗಿ ನೋಡಿದಾಗ ವಾಸನೆ ಬಂದಿದ್ದು, ಹುಲಿ ಮೊದಲೇ ಮೃತವಾಗಿರುವುದಾಗಿ ಭಾವಿಸಿದೆವು ಎಂದು ತಿಳಿಸಿರುತ್ತಾರೆ. ಆನಂತರ 2ನೇ ಮತ್ತು 4ನೇ ಆರೋಪಿಗಳಾದ ನೀವುಗಳು ಹುಲಿಯ ನಾಲ್ಕು ಕಾಲುಗಳನ್ನು ಕತ್ತರಿಸಿ, ಕತ್ತಿಯ ಹಿಂಭಾಗದಿಂದ ಹುಲಿಯ ತಲೆಯ ಹಿಂಭಾಗಕ್ಕೆ ಹೊಡೆದು ಹುಲಿಯ ಕೋರೆ ಹಲ್ಲುಗಳನ್ನು ಬೇರ್ಪಡಿಸಿರುವುದಾಗಿ ತಿಳಿಸಿರುತ್ತಾರೆ. 2 ಕೋರೆ ಹಲ್ಲುಗಳನ್ನು ಆರೋಪಿ 4 ರವರು ತಮ್ಮ ಮನೆಯಿಂದ ಪ್ಲಾಸ್ಟಿಕ್ ಕವರ್ ತಂದಿದ್ದು ಅದರಲ್ಲಿ ಹಾಕಿರುವುದಾಗಿ, ಹುಲಿಯ ಕಾಲುಗಳಿಂದ ಉಗುರುಗಳನ್ನು ಬೇರ್ಪಡಿಸಿ ಆರೋಪಿ 4 ಚೀಲದಲ್ಲಿ ಹಾಕಿದರು ಎಂದು ತಿಳಿಸಿರುತ್ತಾರೆ. ಉಳಿದ 4 ಉಗುರು ಹಾಗೂ ಒಂದು ಕೋರೆ ಹಲ್ಲನ್ನು 1ನೇ ಆರೊಪಿಯಾದ ನೀವು ತೆಗೆದುಕೊಂಡರು ಎಂದು ತಿಳಿಸಿರುತ್ತಾರೆ. 5ನೇ ಆರೋಪಿಯಾದ ನೀವು ತನಗೂ ಸಹ 2 ಉಗುರುಗಳನ್ನು ನೀಡಿದರು ಎಂದು ತಿಳಿಸಿರುತ್ತೀರಿ. ಉಳಿದ ಮೊಣಕಾಲು ಹಾಗೂ ಮಾಂಸವನ್ನು ಅಲ್ಲೆ ಬಿಟ್ಟಿರುವುದಾಗಿ ತಿಳಿಸಿರುತ್ತಾರೆ. 2ನೇ ಮತ್ತು 3ನೇ ಆರೋಪಿಗಳಾದ ನೀವು ಅಂದಾಜು 7 ಉಗುರುಗಳನ್ನು ತೆಗೆದುಕೊಂಡಿರುವುದಾಗಿ ತಿಳಿಸಿರುತ್ತಾರೆ. 4ನೇ ಆರೋಪಿಯಾದ ನೀವು 2ಕೋರೆ ಹಲ್ಲು, ಬೆರಳು ಸಮೇತ 2 ಉಗುರು, ಪ್ರತ್ಯೇಕವಾಗಿ ಇನ್ನೆರಡು ಉಗುರಗಳನ್ನು ತೆಗೆದುಕೊಂಡರು ಎಂದು ತಿಳಿಸಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

**<u>ಪ್ರಶ್ನೆ ಸಂಖ್ಯೆ-10</u>** ಪ್ರಾ.ಸಾ.2/ಚಾ.ಸಾ.2 ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ನುಡಿಯುತ್ತಾ, ಅದೇ ದಿನ ರಾತ್ರಿ 10.30ಕ್ಕೆ ಮತ್ತೊಂದು ಹಡ್ಲು ಬಳಿ ಜಿಂಕೆಯನ್ನು ಭೇಟೆಯಾಡಿ, ಚರ್ಮ ತೆಗೆದು 8 ಪಾಲು ಮಾಡಿಕೊಂಡಿರುವುದಾಗಿ ಆರೋಪಿ 5 ತಿಳಿಸಿರುತ್ತಾರೆ. 5ನೇ ಆರೋಪಿಯು 1ನೇ

ಮತ್ತು 4ನೇ ಆರೋಪಿಗಳಾದ ತಮ್ಮೊಂದಿಗೆ ಈ ಹಿಂದೆಯೂ ಇದೇ ರೀತಿ ಭೇಟಿಗೆ ಹೋಗಿರುವುದಾಗಿ ತಿಳಿಸಿರುತ್ತಾರೆ. ದಿನಾಂಕ 04.09.2020ರಂದು 2 ರಿಂದ 5ನೇ ಆರೋಪಿಗಳಾದ ತಮ್ಮೊಂದಿಗೆ ಮತ್ತು ಮೇಲೆ ಹೇಳಿದ ಅಮಾನತ್ತುಪಡಿಸಿದ ವಸ್ತುಗಳೊಂದಿಗೆ ಫೋಟೊ ತೆಗೆನದಿರುತ್ತಾರೆ. ದಿನಾಂಕ 07.09.2020ರಂದು ವಶಪಡಿಸಿಕೊಂಡ ಎಲ್ಲಾ ಸ್ವತ್ತುಗಳ ಒಟ್ಟು 22 ಮಾದರಿಗಳನ್ನು ಬೆಂಗಳೂರಿನ ವಿಧಿ ವಿಜ್ಞಾನ ಪ್ರಯೋಗಲಾಯಕ್ಕೆ ಕಳುಹಿಸಿರುತ್ತಾರೆ. ವಶಪಡಿಸಿಕೊಂಡು ಉಗುರು, ಕೋರೆ ಹಲ್ಲುಗಳನ್ನು, ಹಾಗೂ ಕೂದಲು ಇರುವ ಒಂದು ಸ್ವೆಟರ್ ಅನ್ನು ಹೈದರಾಬಾದ್ ಸಿಸಿಎಂಬಿ ಗೆ ಕಳುಹಿಸಿರುತ್ತಾರೆ. 3ನೇ ಮತ್ತು 5ನೇ ಆರೋಪಿಗಳು 1ನೇ ಆರೋಪಿಯಾದ ತಮ್ಮ ಬಳಿ 5 ಉಗುರು ಹಾಗೂ 1 ಕೋರೆ ಹಲ್ಲು ಇದೆ ಎಂದು ತಿಳಿಸಿದ ಕಾರಣ ದಿನಾಂಕ 07.09.2020ರಂದು 1ನೇ ಆರೋಪಿಯಾದ ತಮ್ಮನ್ನು ಪೊಲೀಸ್ ಕಸ್ಟಡಿಗೆ ಪಡೆದು ವಿಚಾರಿಸಿದಾಗ ತನ್ನ ಬಳಿ 4 ಉಗುರು, 1 ಕೋರೆ ಹಲ್ಲು ಇದ್ದು ಅದನ್ನು ತನ್ನ ಮನೆಯ ಸ್ನಾನದ ಮನೆಯ ಮೇಲೆ ಇಟ್ಟಿರುವುದಾಗಿ ತಿಳಿಸಿರುತ್ತಾರೆ. ಪುನಃ ಸದರಿ 4 ಉಗುರು, 1 ಕೋರೆ ಹಲ್ಲನ್ನು ಗದ್ದೆಗೆ ಎಸೆದೆನು ಎಂದು ತಿಳಿಸಿರುತ್ತಾರೆ. ಅದರಂತೆ ತಾವುಗಳು ಆರೋಪಿ 1 ರವರ ಮನೆ ಹಾಗೂ ಗದ್ದೆ ಪರಿಶೀಲಿರುತ್ತೇವೆ. ಆದರೆ ಸದರಿ ಉಗುರು ಹಾಗೂ ಕೋರೆ ಹಲ್ಲು ಸಿಕ್ಕಿರುವುದಿಲ್ಲ. ಆರೋಪಿ 1 ಸುಳ್ಳು ಮಾಹಿತಿ ನೀಡಿರುತ್ತಾರೆ ಎಂದು ತಿಳಿದುಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಿಸುವಿರ?

ಉಃ ಸುಳ್ಳು

<u>**ಪ್ರಶ್ನೆ ಸಂಖ್ಯೆ-11**</u> ಪ್ರಾ.ಸಾ.5/ಚಾ.ಸಾ.7 ಶ್ರೀಮತಿ ತೀರ್ಥ ಅವರು ತಮ್ಮ ಸಾಕ್ಷದಲ್ಲಿ ನುಡಿಯುತ್ತಾ, ಕಲ್ಲಹಳ್ಳ ವನ್ಯ ಜೀವಿ ವಲಯದಲ್ಲಿ ಹುಲಿ ಮತ್ತು ಜಿಂಕೆ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ27.08.2020 ರಂದು ಚಾ.ಸಾ.2, ಚಾ.ಸಾ.5 ಹಾಗೂ ಸಿಬ್ಬಂದಿಗಳಾದ ಚಾ.ಸಾ.1, ಮಹೇಶ್, ಅರಣ್ಯ ವೀಕ್ಷಕ, ಬಸಪ್ಪ, ಹಾಗೂ ಶ್ವಾನ ದಳದವರೊಂದಿಗೆ 2ನೇ ಮತ್ತು 3ನೇ ಆರೋಪಿಗಳಾದ ತಮ್ಮ ಮನೆಯನ್ನು ಶೋಧನೆ ಮಾಡಲು ಹೋಗಿರುತ್ತಾರೆ. 2ನೇ ಆರೋಪಿಯಾದ ತಮ್ಮ ಮನೆಯಲ್ಲಿ ಸೂಟ್ಕೇಸ್ ನಲ್ಲಿ 2 ಜೀವಂತ ಕಾಡುತೂಸು ಕಂಡು ಬಂದಿದ್ದು, ಅವುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಮಧ್ಯಾಹ್ನ 12 ಗಂಟೆಗೆ 3ನೇ ಆರೋಪಿಯಾದ ತಮ್ಮ ಮನೆಗೆ ಬಂದು ಪರಿಶೀಲಿಸಿದಾಗ ಕಬ್ಬಿಣದ ಬೀರುವಿನಲ್ಲಿ ಪ್ಲಾಸ್ಟಿಕ್ ಕವರ್ ನಲ್ಲಿದ್ದ ಚಿಲ್ಸ್‌ಗಳು ಮತ್ತು 2 ಕೆಂಪು ಬಣ್ಣದ ಖಾಲಿ ಕಾಡು ತೂಸು ಮತ್ತು ಕೊಠಡಿಯಲ್ಲಿ ಬ್ಯಾಗ್ ನಲ್ಲಿ ಮಚ್ಚು ಹಾಗೂ ಚಿಲ್ಸ್ ಗಳು ಇದ್ದವು. 3ನೇ ಆರೋಪಿಯಾದ ತಮ್ಮನ್ನು ಪರವಾನಗಿ ಬಗ್ಗೆ ಕೇಳಲಾಗಿ ಇಲ್ಲ ಎಂದು ನಡಿದಿರುತ್ತೀರಿ. ಮನೆಯ ಹಿಂಬಾಗಿಲಿನಲ್ಲಿ ತೂಗು ಹಾಕಿದ್ದ ಸ್ವೆಟರ್ ನಲ್ಲಿ ಪ್ರಾಣಿ ಕೂದಲು ಇದ್ದು, ಅವುಗಳು ಮೇಲ್ನೋಟಕ್ಕೆ ಹುಲಿಯ ಕೂದಲಿನಂತಿ ಕಂಡು ಬಂದಿದ್ದು ಅದನ್ನು ತಮ್ಮ ಸಮಕ್ಷಮ ಅರಣ್ಯ ಮಹಜರ್ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತಾರೆ. ಮನೆಯ ಮುಂಭಾಗದಲ್ಲಿ ಹೂತಿಟ್ಟಿದ್ದ ಹುಲಿಯ ಉಗುರುಗಳನ್ನು ಶ್ವಾನದಳ ಗುರುತು ಹಿಡಿದಿರುತ್ತದೆ. ಹುಲಿಯ ದಬಡೆ ಭಾಗದ ಹಲ್ಲುಗಳನ್ನು ಸಹ ವಶಕ್ಕೆ ಪಡೆದಿರುತ್ತಾರೆ. ಈ ಬಗ್ಗೆ ತನಿಖಾಧಿಕಾರಿಗಳಿಗೆ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

**ಪ್ರಶ್ನೆ ಸಂಖ್ಯೆ-12** ಪ್ರಾ.ಸಾ.6/ಚಾ.ಸಾ.11 ಸಮೀರ್ ಅಹಮ್ಮದ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ಆರೋಪಿತರಾದ ತಾವುಗಳು ಪರಿಚಯವಿರುವುದಾಗಿ, ಆರೋಪಿ 1ರವರನ್ನು ಈ ಪ್ರಕರಣಕ್ಕೆ ಸಂಬಂದಿಸಿದಂತೆ ಚಾಸಾ 20 ರವರೊಂದಿಗೆ ಹಾಗೂ ನಮ್ಮ ಸಹೋದ್ಯೋಗಿಗಳೊಂದಿಗೆ ಕೃತ್ಯ ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ 1ನೇ ಆರೋಪಿಯಾದ ನೀವು ಹುಲಿಗೆ ಗುಂಡು ಹೊಡೆದ ಸ್ಥಳವನ್ನು ತೋರಿಸಿರುತ್ತಾರೆ. ಸದರಿ ಸ್ಥಳ ಕೆಸುವಿನ ಹಡ್ಲು ಆಗಿರುತ್ತದೆ. ಸದರಿ ಸ್ಥಳದಲ್ಲಿ ಮೃತ ಹುಲಿಯ 4 ಕಾಲುಗಳಿದ್ದ ಉಗುರುಗಳನ್ನು ಕತ್ತರಿಸಿ ಬೇರ್ಪಡಿಸಿರುತ್ತಾರೆ, ಉಗುರುಗಳನ್ನು ಆರೋಪಿ 1 ನಮಗೆ ತೋರಿಸಿರುತ್ತಾರೆ. ಸದರಿ ಸ್ಥಳ ಪರಿಶೀಲಿಸಿದಾಗ 4 ಹುಲಿಯ ಕಾಲುಗಳ ಪಾದಗಳು ದೊರಕಿರುತ್ತದೆ. ಸ್ಥಳದಲ್ಲಿ ಒಂದು ಕಾಡು ತೂಸು ದೊರಕಿರುತ್ತದೆ. ಚಾಸಾ 20 ರವರು ಸದರಿ ವಸ್ತುಗಳನ್ನು ಮಹಜರ್ ಮಾಡಿ ಅಮಾನತುಪಡಿಸಿರುತ್ತಾರೆ. ಮಹಜರ್ ಗೆ ತಾನು ಸಹಿ ಮಾಡಿರುತ್ತೇನೆ. 2-3 ದಿನಗಳ ನಂತರ 2ನೇ ಆರೋಪಿಯಾದ ತಮ್ಮ ಮನೆಗೆ ತಾನು ವಿಲಾಸ್ ಪವರ್ ಹಾಗೂ ಎನ್.ಜ.ಒ ಮಾದಪ್ಪರವರು ಬಂದಿದ್ದಾಗ 2ನೇ ಆರೋಪಿಯಾದ ನೀವು ಮನೆಯಲ್ಲಿದ್ದು ಬೆಡ್ಡನ ಕೆಳಗಡೆ ಅವಿತು ಇಟ್ಟಿದ್ದ ಗನನ್ನು ತಾವೇ ತೋರಿಸಿ ಸದರಿ ಗನ್ನಿಗೆ ಸಂಬಂಧಿಸಿದ ಪರವಾನಗಿ ಹಾಗೂ ಕಾಡು ತೂಸನ್ನು ಹಾಜರು ಪಡಿಸಿರುತ್ತೀರಿ. ತನಿಖಾಧಿಕಾರಿಗಳು ಅವುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

**ಪ್ರಶ್ನೆ ಸಂಖ್ಯೆ-13** ಪ್ರಾ.ಸಾ.7/ಚಾ.ಸಾ.12 ಸಂತೋಷ್ ಹುಗಾರ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿಃ- 28.08.2020 ರಲ್ಲಿ 4ನೇ ಆರೋಪಿಯಾದ ತಮ್ಮ ಮನೆಗೆ ತಾನು ಚಾಸಾ - 9 ಹಾಗೂ ಇತರೆ ಸಿಬ್ಬಂದಿ ಬಂದಾಗ ನೀವು ಹಾಜರಿಲಿಲ್ಲ. ನಿಮ್ಮ ತಾಯಿ ಹಾಜರಿದ್ದು, ತಮ ಮಗ ಇಲ್ಲ ಎಂದು ತಿಳಿಸಿರುತ್ತಾರೆ. ಚಾಸಾ- 9 ರವರ ಮೂಲಕ ಮನೆಯನ್ನು ಪರಿಶೀಲಿಸಿದಾಗ 1 ಬಳಕೆ ಮಾಡಿದ ಕಾಡು ತೊಸು, ಗನ್ ಪೌಡರ್ ಸಿಕ್ಕಿರುತ್ತದ. ದಿಃ- 01.09.2020 ರಂದು 4ನೇ ಆರೋಪಿಯಾದ ನಿಮ್ಮನ್ನು ಕರೆದುಕೊಂಡು ತಮ್ಮ ಮನೆಯ ಬಳಿ ಇರುವ ಅಡಿಕೆ ತೋಟಕ್ಕೆ ಹೋಗಿರುತ್ತಾರೆ. ಅಡಿಕೆ ಮರದ ಕೆಳಗಡೆ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಹುಲಿಯ 2 ಕೊರೆ ಹಲ್ಲುಗಳು, ನಾಲ್ಕು ಉಗುರುಗಳು ಇದ್ದು. ಸದರಿ ಕೊರೆ ಹಲ್ಲುಗಳು, ಉಗುರುಗಳನ್ನು ಮಹಜರು ಮಾಡಿ ಅಮಾನತ್ತುಪಡಿಸಿರುತ್ತಾರೆ. ಈ ಬಗ್ಗೆ ಹೇಳಿಕೆಯನ್ನು ತನಿಖಾಧಿಕಾರಿಗೆ ಹೇಳಿರುತ್ತಾರೆ. ಹುಲಿಯ ಕೊರೆ ಹಲ್ಲುಗಳು, ಉಗುರುಗಳನ್ನು ನ್ಯಾಯಾಲಯದ ಅನುಮತಿ ಪಡೆದು ನಾಶ ಪಡಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

**ಪ್ರಶ್ನೆ ಸಂಖ್ಯೆ-14** ಪ್ರಾ.ಸಾ.8/ಚಾ.ಸಾ.19 ನವೀನ್ ರಾವತ್ ರವರು ತಮ್ಮ ಸಾಕ್ಷದಲ್ಲಿ ನುಡಿಯುತ್ತಾ, ದಿಃ26.08.2020 ರಂದು ಪ್ರಕರಣಕ್ಕೆ ಸಂಬಂಧಿಸಿದಂತೆ ತಾನು ಚಾ.ಸಾ.20 ರವರೊಂದಿಗೆ ಹುಲಿಯ ಮರಣೋತ್ತರ ಪರೀಕ್ಷೆಯನ್ನು ಬೆ.10.30 ರಿಂದ ಸಂಜೆ 5.30 ರ ತನಕ ಮಾಡಿರುತ್ತಾರೆ. ಆ ಸಮಯದಲ್ಲಿ ತಾನು ವಿಡಿಯೋವನ್ನು ತೆಗೆದಿರುವುದಾಗಿ, ದಿಃ27.08.2020 ರಿಂದ 04.09.2020 ರ ತನಕ 1 ರಿಂದ 5ನೇ ಆರೋಪಿಗಳಾದ ತಮ್ಮ ದೂರವಾಣಿ ಕರೆ ಬಗ್ಗೆ ಮಾಹಿತಿಯನ್ನು ಕಲೆ ಹಾಕಿ ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

**ಪ್ರಶ್ನೆ ಸಂಖ್ಯೆ-15** ಪ್ರಾ.ಸಾ.9/ಚಾ.ಸಾ.13 ಮಾದಪ್ಪ ಕೆ.ಎನ್ ರವರು ತಮ್ಮ ಸಾಕ್ಯೆದಲ್ಲಿ ನುಡಿಯುತ್ತಾ, ದಿ. 03.09.2020 ರಂದು ಚಾಸಾ 20 ರವರೊಂದಿಗೆ ತಾನು ಹಾಗೂ ಚಾಸಾ 1, 11, 14 ಮತ್ತು 2 ನೇ ಆರೋಪಿಯಾದ ತಮ್ಮೊಂದಿಗೆ ತಮ್ಮ ಮನೆಗೆ ಹೋಗಿರುತ್ತಾರೆ, ಆಗ 2ನೇ ಆರೋಪಿಯಾದ ನೀವು ಕೃತ್ಯಕ್ಕೆ ಬಳಿಸಿದ ಬಂಧೂಕು, 3 ಕಾಡು ತೂಸು ಹಾಗೂ ಪರವಾನಗಿಯನ್ನು ನಮಗೆ ತಂದುಕೊಟ್ಟಿರುತ್ತೀರಿ. ತನಿಖಾಧಿಕಾರಿಗಳು ತಮ್ಮನ್ನು ವಿಚಾರಿಸಲಾಗಿ ತಾವು ಹತ್ತು ದಿನಗಳ ಹಿಂದೆ ಅರಣ್ಯದಲ್ಲಿ ಬೇಟೆ ಆಡಿ ಅದರ ಅವಶೇಷಗಳನ್ನು ಹೂತಿಟ್ಟಿರುವ ಸ್ಥಳವನ್ನು ತೋರಿಸುವುದಾಗಿ ತಿಳಿಸಿರುತ್ತೀರಿ. ಅದರಂತೆ ತಾನು ಹಾಗೂ ತನಿಖಾಧಿಕಾರಿಗಳು 2ನೇ ಆರೋಪಿಯಾದ ತಮ್ಮ ಮನೆಯ ಹಿಂದೆ ಹೋಗಿ ನೋಡಿದಾಗ ತಾವು ಹೂತಿಟ್ಟದ್ದ ಸ್ಥಳವನ್ನು ತೋರಿಸಿರುತ್ತೀರಿ. ಅದರಲ್ಲಿ ಕೆಂದಳಿಲು ಹೋಲುವಂತಹ ಕೂದಲು ಇತ್ತು. ತನಿಖಾಧಿಕಾರಿಗಳು ಸ್ಥಳ ಮಹಜರ್ ಮಾಡಿ ಮೇಲೆ ಹೇಳಿದ ವಸ್ತುಗಳು ಹಾಗೂ ಕೆಂದಳಿಲಿನ ಕೂದಲನ್ನು ಅಮಾನತುಪಡಿಸಿರುತ್ತಾರೆ ಆಗ ತಾನು ಸಹಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

**ಪ್ರಶ್ನೆ ಸಂಖ್ಯೆ-16** ಪ್ರಾ.ಸಾ.9/ಚಾ.ಸಾ.13 ರವರು ತಮ್ಮ ಮುಂದುವರಿದ ಸಾಕ್ಯೆದಲ್ಲಿ ನುಡಿಯುತ್ತಾ, ಅದೇ ದಿನ ಮ. 2.30ರ ಸಮಯದಲ್ಲಿ 3ನೇ ಆರೋಪಿಯಾದ ನಿಮ್ಮನ್ನು ಕರೆದುಕೊಂಡು ಘಟನಾ ಸ್ಥಳಕ್ಕೆ ಹೋಗಿರುತ್ತಾರೆ. 3ನೇ ಆರೋಪಿಯಾದ ತಾವು 24.08.2020 ರಂದು ನಾಗರಹೊಳೆ ಹುಲಿ ಸಂರಕ್ಷಿತಾ ಅರಣ್ಯಸಂರಕ್ಷಣಾ ಪ್ರದೇಶದಲ್ಲಿ ಕೆಸುವಿನ ಹಡ್ಲುವಿನಲ್ಲಿ ತಾವು ಹಾಗೂ ಉಳಿದ ಆರೋಪಿಗಳು ಸೇರಿ ಬಂಧೂಕಿನೊಂದಿಗೆ ಹೋಗುತ್ತಿದ್ದಾಗ 5ನೇ ಆರೋಪಿಯು ಹುಲಿಯನ್ನು ನೋಡಿ 1ನೇ ಆರೋಪಿಯಾದ ತಮ್ಮ ಕೈಗೆ ಬಂಧೂಕನ್ನು ನೀಡಿರುತ್ತಾರೆ. ಆನಂತರ 1ನೇ ಆರೋಪಿಯಾದ ನೀವು ಮುಂದೆ ಬಂದು ಹುಲಿಗೆ ಗುಂಡು ಹಾರಿಸಿದರು ಎಂದು ತಿಳಿಸಿರುತ್ತಾರೆ. ಆನಂತರ ತಾನು ಮತ್ತು ಇತರೇ ಆರೋಪಿತರು ಹತ್ತಿರ ಹೋಗಿ ನೋಡಲಾಗಿ ಹುಲಿ ಮೃತರಾಗಿರುವುದು ತಿಳಿಯಿತು ಎಂದು ತಿಳಿಸಿರುತ್ತಾರೆ. ಆನಂತರ ಎಲ್ಲರೂ ಸೇರಿ ಕತ್ತಿಯಿಂದ ಹುಲಿಯ ಕೈ ಮತ್ತು ಕಾಲಿನಿಂದ ಉಗುರುಗಳನ್ನು ಬೇರ್ಪಡಿಸಿದೆವು, ಹಲ್ಲುಗಳನ್ನು ಬೇಪರ್ಡಿಸಿದೆವು. ಆನಂತರ

ಹುಲಿಯ ಕೈ, ಕಾಲುಗಳನ್ನು ಬೇರ್ಪಡಿಸಿ ಪಶ್ಚಿಮ ದಿಕ್ಕಿಗೆ ಎಸೆದೆವು ನಂತರ ಎಲ್ಲರು ಸೇರಿ ಜಿಂಕೆಯನ್ನು ಬೇಟೆ ಆಡಿ ಮಾಂಸವನ್ನು ಹಂಚಿಕೊಂಡಿದ್ದಾಗಿ ತಿಳಿಸಿರುತ್ತಾರೆ. ನಂತರ 5ನೇ ಆರೋಪಿಯಾದ ನೀವು ತಮ್ಮ ಜೇಬಿನಲ್ಲಿ ಪ್ಲಾಸ್ಟಿಕ್ ಕವರ್ ನಲ್ಲಿ ಇಟ್ಟಿದ್ದ ಹಲಿಯ ಉಗುರುಗಳನ್ನು ತೆಗೆದು ಕೊಟ್ಟಿರುತ್ತೀರ ಮತ್ತು ಕೃತ್ಯಕ್ಕೆ ಬಳಸಿದ 3 ಶೆಲ್ ನ ಒಂದು ಸ್ಟೀಲ್ ಟಾರ್ಚ್ ಅನ್ನು ಹಾಜರು ಪಡಿಸಿರುತ್ತಾರೆ. ಆಗ ತನಿಖಾಧಿಕಾರಿಗಳು ಸ್ಥಳ ಮಹಜರ್ ಮಾಡಿ ಹುಲಿಯ 2 ಉಗುರು ಹಾಗೂ ಟಾರ್ಚ್ ಅನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

**<u>ಪ್ರಶ್ನೆ ಸಂಖ್ಯೆ-17</u>** ಪ್ರಾ.ಸಾ.10/ಚಾ.ಸಾ.4 ವೆಂಕಟನಾಯ್ಡು ರವರು ತಮ್ಮ ಸಾಕ್ಷದಲ್ಲಿ ನುಡಿಯುತ್ತಾ, ನಾವು ಅರಣ್ಯ ರಕ್ಷಿಸುವ ನಿಟ್ಟಿನಲ್ಲಿ ಹಲವು ಜಾಗೃತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದೆವು. ದಿ. 26.08.2020 ರಂದು ನಮ್ಮ ಜೊತೆ ಕೆಲಸ ಮಾಡುವ ವ್ಯಕ್ತಿ ಒಬ್ಬರು ಹುಲಿಯನ್ನು ಬೇಟೆ ಹಾಡಿದ್ದಾರೆ ಎಂದು ವಿಚಾರ ತಿಳಿಸಿರುತ್ತಾರೆ. ಈ ಬಗ್ಗೆ ನಾವು ಅರಣ್ಯ ಇಲಾಖೆಯವರನ್ನು ಪ್ರಶ್ನೆ ಮಾಡಿದೆವು. ಅರಣ್ಯದಲ್ಲಿ ಪ್ರಾಣಿಗಳ ರಕ್ಷಣೆ ಬಗ್ಗೆ ಯಾವ ಕ್ರಮ ಕೈ ಗೊಂಡಿದ್ದೀರಿ ಎಂದು ಕೇಳಿದೆವು. ಆಗ ಹುಲಿ ಬೇಟೆ ಪ್ರಕರಣಕ್ಕೆ ಸಂಬಂದಿಸಿದಂತೆ ನಾವು ಸಹ ಅರಣ್ಯ ಇಲಾಖೆಯವರ ಜೊತೆ ಹೋಗುತ್ತಿದ್ದೆವು. ದಿ. 03.09.2020 ರಂದು ತಾನು ಚಾಸಾ 1, 20, 3, 11, ಹಾಗೂ ವಿಲಾಸ್ ರಾವ್ ಪವಾರ್ರವರೊಂದಿಗೆ, 2ನೇ ಆರೋಪಿಯ ಮನೆಗೆ ಮನೆಗೆ ಹೋಗಿರುತ್ತೇವೆ, ಆಗ 2ನೇ ಆರೋಪಿಯಾದ ನೀವು ಕೃತ್ಯಕ್ಕೆ ಬಳಿಸಿದ ಬಂಧೂಕು, 5 ಬಳಸಿರುವ ಕಾಡು ತೂಸು ಹಾಗೂ 3 ಬಳಕೆ ಆಗದ ಕಾಡು ತೂಸು ಹಾಗೂ ಪರವಾನಗಿಯನ್ನು ತನಿಖಾಧಿಕಾರಿಗೆ ಮನೆಯಿಂದ ತೆಗೆದುಕೊಟ್ಟಿರುತ್ತೀರಿ. ತನಿಖಾಧಿಕಾರಿಗಳು ವಿಚಾರಿಸಲಾಗಿ 2ನೇ ಆರೋಪಿಯಾದ ನೀವು, ಹತ್ತು ದಿನಗಳ ಹಿಂದೆ ಅರಣ್ಯದಲ್ಲಿ ಬೇಟೆ ಆಡಿ ಅದರ ಅವಶೇಷಗಳನ್ನು ಹೂತಿಟ್ಟಿರುವ ಸ್ಥಳವನ್ನು ತೋರಿಸುವುದಾಗಿ ತಿಳಿಸಿದ ಮೇರೆಗೆ ತನಿಖಾಧಿಕಾರಿಗಳು ತಮ್ಮ ಮನೆಯ ಹಿಂದೆ ಹೋಗಿ ನೋಡಿದಾಗ 2ನೇ ಆರೋಪಿಯಾದ ನೀವು ಹೂತಿಟ್ಟಿದ್ದ ಸ್ಥಳವನ್ನು ತೋರಿಸಿರುತ್ತೀರಿ. ಅದರಲ್ಲಿ ಕೆಂದಳಿಲು ಹೋಲುವಂತಹ ಕೂದಲು ಇತ್ತು. ತನಿಖಾಧಿಕಾರಿಗಳು ಸ್ಥಳ ಮಹಜರ್ ಮಾಡಿ ಮೇಲೆ ಹೇಳಿದ ವಸ್ತುಗಳು ಹಾಗೂ ಕೆಂದಳಿಲಿನ ಕೂದಲನ್ನು ಅಮಾನತುಪಡಿಸಿದರು ಎಂದು ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

**<u>ಪ್ರಶ್ನೆ ಸಂಖ್ಯೆ-18</u>** ಪ್ರಾ.ಸಾ.10/ಚಾ.ಸಾ.4 ರವರು ತಮ್ಮ ಮುಂದುವರಿದ ಸಾಕ್ಷದಲ್ಲಿ ನುಡಿಯುತ್ತಾ, ಅದೇ ದಿನ ಮ. 2.30ರ ಸಮಯದಲ್ಲಿ 3ನೇ ಆರೋಪಿಯು ನಮ್ಮ ಜೊತೆ ಇದ್ದು ಅವರನ್ನು ಕರೆದುಕೊಂಡು ಚಾಸಾ 20, 2, 1, ತಾನು 3ನೇ ಆರೋಪಿಯಾದ ನೀವು ತೋರಿಸಿದಂತೆ ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. 3ನೇ ಆರೋಪಿಯಾದ ತಾವು 24.08.2020 ರಂದು ನಾಗರಹೊಳೆ ಹುಲಿ ಸಂರಕ್ಷಿತಾ ಅರಣ್ಯಸಂರಕ್ಷಣಾ ಪ್ರದೇಶದಲ್ಲಿ ಕೆಸುವಿನ ಹಡ್ಲುವಿನಲ್ಲಿ ಉಳಿದ ಇತರ ಆರೋಪಿಗಳೊಡನೆ ಸೇರಿ ಬಂಧೂಕಿನೊಂದಿಗೆ ಹೋಗುತ್ತಿದ್ದಾಗ

ಗೋಪಾಲ್ @ ರಾಜು ಎನ್ನುವವರು, ಹುಲಿಯನ್ನು ನೋಡಿ 1ನೇ ಆರೋಪಿಯಾದ ಸಂತೋಷ್‌ರವರ ಕೈಗೆ ಬಂಧೂಕನ್ನು ನೀಡಿರುತ್ತಾರೆ. ಆನಂತರ 1ನೇ ಆರೋಪಿಯಾದ ನೀವು ಮುಂದೆ ಬಂದು ಹುಲಿಗೆ ಗುಂಡು ಹಾರಿಸಿದರು ಎಂದು ತಿಳಿಸಿರುತ್ತಾರೆ. ಅನಂತರ ಆರೋಪಿತರೆಲ್ಲರು ಹತ್ತಿರ ಹೋಗಿ ನೋಡಲಾಗಿ ಹುಲಿ ಮೃತರಾಗಿರುವುದು ತಿಳಿದು ಬಂದಿರುತ್ತದೆ. ಆನಂತರ ಎಲ್ಲರೂ ಸೇರಿ ಕತ್ತಿಯಿಂದ ಹುಲಿಯ ಕೈ ಮತ್ತು ಕಾಲಿನಿಂದ ಉಗುರುಗಳನ್ನು ಬೇರ್ಪಡಿಸಿರುತ್ತಾರೆ, ಹಲ್ಲುಗಳನ್ನು ಬೇಪರ್ಡಿಸಿರುತ್ತಾರೆ. ಆನಂತರ ಹುಲಿಯ ಕೈ, ಕಾಲುಗಳನ್ನು ಬೇರ್ಪಡಿಸಿ ಪಶ್ಚಿಮ ದಿಕ್ಕಿಗೆ ಎಸೆದೆವು ಎಸೆದಿರುತ್ತಾರೆ. ಆರೋಪಿ 3 ಮುಂದುವರೆದು ತಾವೆಲ್ಲರೂ ಸೇರಿ ಜಿಂಕೆಯನ್ನು ಬೇಟೆ ಆಡಿ ಮಾಂಸವನ್ನು ಹಂಚಿಕೊಂಡಿದ್ದಾಗಿ ತಿಳಿಸಿರುತ್ತಾರೆ. ಅದೇ ದಿನ ಸಂಜೆ 5 ಗಂಟೆಗೆ ತನಿಖಾಧಿಕಾರಿಗಳಿಗೆ ಬಂದ ಬಾತ್ಮಿದಾರರ ಖಚಿತ ಮಾಹಿತಿಯಂತೆ ಆರೋಪಿ 5 ರಾಜು ಮನೆಯಲ್ಲಿ ಇರುವುದು ತಿಳಿದು ಬಂದು ಅಲ್ಲಿಗೆ ತಾನು, ಚಾಸಾ 20, 2, 1 ಹೋದಾಗ 5ನೇ ಆರೋಪಿಯಾದ ತಾವು ಮನೆಯಲ್ಲಿದ್ದು, ತನಿಖಾಧಿಕಾರಿಗಳು ವಿಚಾರಿಸಿದಾಗ 5ನೇ ಆರೋಪಿಯಾದ ನೀವು ತಮ್ಮ ಪ್ಯಾಂಟ್ ಜೇಬಿನಲ್ಲಿ ಪ್ಲಾಸ್ಟಿಕ್ ಕವರ್ ನಲ್ಲಿ ಹುಲಿಯ ಉಗುರುಗಳನ್ನು ಇಟ್ಟಿರುವುದಾಗಿ ತಿಳಿಸಿ ಅವುಗಳನ್ನು ತೆಗೆದುಕೊಟ್ಟಿರುತ್ತಾರೆ. ಕೃತ್ಯಕ್ಕೆ ಬಳಿಸಿದ 3 ಶೆಲ್‌ನ ಒಂದು ಸ್ಟೀಲ್ ಟಾರ್ಚ್ ಅನ್ನು ಹಾಜರುಪಡಿಸಿರುತ್ತಾರೆ. ಆಗ ತನಿಖಾಧಿಕಾರಿಗಳು ಸ್ಥಳ ಮಹಜರ್ ಮಾಡಿ ಹುಲಿಯ 2 ಉಗುರು ಹಾಗೂ ಟಾರ್ಚ್ ಅನ್ನು ಅಮಾನತುಪಡಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

**ಪ್ರಶ್ನೆ ಸಂಖ್ಯೆ-19** ಪ್ರಾ.ಸಾ.11/ಚಾ.ಸಾ.17 ಯೋಗೇಶ್ ಎಂ.ಸಿ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿಃ28.08.2020 ರಂದು ಚಾ.ಸಾ.20 ರವರು ಸದರಿ ಪ್ರಕರಣದಲಿಲ ತಲ ಮಡಿಸಿಕೊಂಡಿದ್ದವರನ್ನು ಪತ್ತೆ ಹಚ್ಚಲು ತನ್ನನ್ನು, ಗಣೇಶ್ ಬರಮಪ್ಪ ಹಾಗೂ ಚಾಲಕ ಬಸವರಾಜು ಮತ್ತು ನೀರನ್ ರವರನ್ನು ಒಳಗೊಂಡಂತೆ ತಂಡ ರಚಿಸಿರುತ್ತಾರೆ. ಬಾತ್ಮಿದಾರರು ಹಾಗೂ ಸಿ ಡಿ ಆರ್ ಮಾಹಿತಿಯನ್ನು ತಮಗೆ ನೀಡಿರುತ್ತಾರೆ. ಅದರಂತೆ ದಿಃ31.08.2020 ರಂದು ರಾಮ ನಗರದ ಕೆ.ಎಸ್.ಆರ್.ಟಿ.ಸಿ ಬಸ್ ಸ್ಟಾಂಡ್ ಪಕ್ಕ 4ನೇ ಆರೋಪಿಯಾದ ತಮ್ಮನ್ನು ವಶಕ್ಕೆ ಪಡೆದು ಮರುದಿನ ಬೆ.6.30 ಕ್ಕೆ ಚಾ.ಸಾ.20 ರವರ ಮುಂದೆ ಹಾಜರುಪಡಿಸಿರುತ್ತಾರೆ. ದಿಃ02.09.2020 ರಂದು 2ನೇ ಆರೋಪಿಯಾದ ತಮ್ಮ ಹೇಳಿಕೆ ಮೇರೆಗೆ ಹಾಗೂ ತನಿಖಾಧಿಕಾರಿಗಳ ಆದೇಶದಂತೆ ಶ್ರೀಮತಿ ಶೀಲಾ ವೆಂಕಟೇಶ್ವರ ಲೇಔಟ್ ಸರ್ವೆ ನಂ.27/1 ಯರಂಡಹಳ್ಳಿ ಬೆಂಗಳೂರು ಬೊಮ್ಮಸಂದ್ರ ಅಲ್ಲಿಗೆ ಹೋಗಿ 2ನೇ ಆರೋಪಿಯಾದ ನೀವು ಬಳುಸುತ್ತಿದ್ದ ಸ್ಯಾಮ್‌ಸಂಗ್ ಮೊಬೈಲ್, ಬೈಕ್ ಮತ್ತು 2 ಹೆಲ್ಮೆಟ್ ಅನ್ನು ವಶಕ್ಕೆ ಪಡೆದು ದಿಃ03.09.2020 ರಂದು ತನಿಖಾಧಿಕಾರಿ ಮುಂದೆ ಹಾಜರು ಪಡಿಸಿರುತ್ತಾರೆ. ದಿಃ07.09.2020 ರಂದು ಪ್ರಕರಣದಲ್ಲಿ ಅಮಾನತ್ತು ಪಡಿಸಿದ ಕೆಲವು 22 ಮಾದರಿಗಳನ್ನು ಎಫ್.ಎಸ್.ಎಲ್ ಬೆಂಗಳೂರು ಮಡಿವಾಳಕ್ಕೆ ತೆಗೆದುಕೊಂಡು ಹೋಗಿರುತ್ತಾರೆ, ಆ ಬಗ್ಗೆ ತನಿಖಾಧಿಕಾರಿಗಳಿಗೆ ವರದಿಯನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

**ಪ್ರಶ್ನೆ ಸಂಖ್ಯೆ-20** ಪ್ರಾ.ಸಾ.12/ಚಾ.ಸಾ.18 ಶ್ರೀಪಾಲ ಕೆ ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿ. 25.08.2020 ರಂದು ನಿರ್ದೇಶಕರು ರಾಜೀವ ಗಾಂದಿ ರಾಷ್ಟ್ರೀಯ ಉದ್ಯಾನದವರ ಮೌಖಿಕ ಆದೇಶದಂತೆ ಕಲ್ಲಹಾಳ ವನ್ಯ ಜೀವಿ ವಲಯದಲ್ಲಿ ಹುಲಿ ಹತ್ಯೆ ಪ್ರಕರಣಕ್ಕೆ ಸಂಬಂದಿಸಿದಂತೆ ಶ್ವಾನದಳವನ್ನು ಕರೆದಕೊಂಡು ಬರುವಂತೆ ತಿಳಿಸಿರುತ್ತಾರೆ. ಅದರಂತೆ ತಾನು ದಿ. 25.08.2020 ರಂದು  ರಾಣಾ ಎಂಬ ಹೆಸರಿನ ಶ್ವಾನದೊಂದಿಗೆ ನಾಗರಹೊಳೆ ವನ್ಯ ಜೀವಿ ವಲಯಕ್ಕೆ ರಾತ್ರಿ ವೇಳೆ ಬಂದಿರುತ್ತೇನೆ. ಸದರಿ ರಾಣಾ ಶ್ವಾನವನ್ನು ನೋಡಿಕೊಳ್ಳುವಂತಹ ಕಾಳ ಕಲ್ಕರ್ ಮೊಗೆ ಎಂಬ ವ್ಯಕ್ತಿ ಸಹ ನಮ್ಮ ಜೊತೆ ಬಂದಿರುತ್ತಾರೆ. ರಾತ್ರಿ ಆಗಿದ್ದ ಕಾರಣ ಮರುದಿನ ನಾವು ಕಾರ್ಯಚಾರಣೆಯನ್ನು ಪ್ರಾರಂಭಿಸಿರುತ್ತೇವೆ. ಮರುದಿನ ಅಂದರೆ ದಿ. 26.08.2020 ರಂದು ಚಾಸಾ 20, 2, ಕಲ್ಲಹಳ್ಳ ಅರಣ್ಯ ವಲಯದ ಸಿಬ್ಬಂದಿಗಳು ಹಾಗೂ ಶ್ವಾನದಳದ ಸಿಬ್ಬಂದಿಯವರೆಲ್ಲರೂ ಮಲ್ಲೂರು ಶಾಖೆ, ತಟ್ಟೆಕೆರೆ ಗಸ್ತು, ಕೆಸುವಿನ ಹಾಡ್ಲು ಸ್ಥಳಕ್ಕೆ ಹೋಗಿರುತ್ತಾರೆ. ಅಲ್ಲಿಂದ ರಾಣಾ ಶ್ವಾನವು ನಮ್ಮನ್ನು ತಟ್ಟೆಕೆರೆ ಗ್ರಾಮದ 1ನೇ ಆರೋಪಿಯಾದ ತಮ್ಮ ಮನೆಗೆ ಕರೆದುಕೊಂಡು ಬಂದಿರುತ್ತದೆ. ತನಿಖಾದಿಕಾರಿಗಳು ಸದರಿ ಮನೆಯವರಿಗೆ ಈ ಪ್ರಕರಣಕ್ಕೆ ಸಂಬಂದಿಸಿದಂತೆ ಶ್ವಾನ ಸೂಚಿಸಿದ ಸೂಚನೆಯಂತೆ ಪರಿಶೀಲಿಸಬೇಕು ಎಂಬ ಸೂಚನೆ ನೀಡಿರುತ್ತಾರೆ. ಮನೆಯನ್ನು ಪರಿಶೀಲಿಸಿದಾಗ ಮಂಚದ ಕೆಳಗಡೆ ಸ್ಟೀಲ್ ಪಾತ್ರೆಯಲ್ಲಿ ಜಿಂಕೆಯ ಹಸಿ ಮಾಂಸ ಕಂಡುಬಂದಿರುತ್ತದೆ. ನಂತರ ಅಡಿಗೆ ಮನೆಯನ್ನು ಪರಿಶೀಲಿಸಿದಾಗ 5 ಲೀ ಅಲ್ಯೂಮಿನಿಯಂ ಕುಕ್ಕರ್ ನಲ್ಲಿ ಅಂದಾಜು 100 ಗ್ರಾಂ ಬೇಯಿಸಿದ ಮಾಂಸ ಕಂಡು ಬಂದಿರುತ್ತದೆ. ಮನೆಯ ಅಟ್ಟವನ್ನು ಪರಿಶೀಲಿಸಿದಾಗ ಅಲ್ಯೂಮಿನಿಯಂ ಪಾತ್ರೆ ಒಂದು ಸ್ಟೀಲ್ ಲೋಟ 3 ಜಿಂಕೆಯ ಕಾಲುಗಳು, ಸಣ್ಣ ಮೊಳೆಗಳು ಕತ್ತರಿಸಿರುವ ಪ್ಲಾಸ್ಟಿಕ್  ವೈರ್ ಇದ್ದವು. ಮತ್ತೊಂದು ಕವರ ನಲ್ಲಿ 300 ಗ್ರಾಂ ಚಿಲ್ಸ್ ಇತ್ತು. 2ಜೀವಂತ ಕಾಡು ತೂಸುಗಳು ಇದ್ದವು. ಮನೆ ಸುತ್ತ ಪರಿಶೀಲಿಸಿದಾಗ ಕೊಟ್ಟಿಗೆ ಬಳಿ ಮಾಂಸ ಕತ್ತರಿಸುವ ಮಚ್ಚು ಸಿಕ್ಕಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

**ಪ್ರಶ್ನೆ ಸಂಖ್ಯೆ-21** ಪ್ರಾ.ಸಾ.12/ಚಾ.ಸಾ.18 ರವರು ತಮ್ಮ ಮುಂದುವರಿದ ಸಾಕ್ಷದಲ್ಲಿ ನುಡಿಯುತ್ತಾ, ದಿ. 27.08.2020 ರಂದು ಮ.12 ಗಂಟೆ ಸಮಯಕ್ಕೆ 3ನೇ ಆರೋಪಿಯಾದ ತಮ್ಮ ಮನೆಗೆ ಚಾ.ಸಾ.18ರವರು ಇತರರೊಂದಿಗೆ ಬಂದಿರುತ್ತಾರೆ. ಚಾಸಾ 2 ರವರು ಶ್ವಾನದೊಂದಿಗೆ ಮನೆ ಸುತ್ತ ಪರಿಶೀಲಿಸುವಂತೆ ತಿಳಿಸಿರುತ್ತಾರೆ. ಅದರಂತೆ ತಾನು ಮತ್ತು ಶ್ವಾನ ಪರಿಶೀಲಿಸುವಾಗ ಮನೆಯ ಹಿಂಭಾಗ ಸುಮಾರು 20 ಮೀ ದೂರದಲ್ಲಿ ಒಂದು ಗುಂಡಿಯಲ್ಲಿ ಪ್ಲಾಸ್ಟಿಕ್ ಕವರ್ ನಲ್ಲಿ ಏನನ್ನು ಹೂತಿರುವುದು ಕಂಡು ಬಂದಿರುತ್ತದೆ. ತಕ್ಷಣ ಚಾಸಾ 2 ರವರಿಗೆ ತಿಳಿಸಿರುತ್ತೇನೆ. ಸದರಿ ಗುಂಡಿಯನ್ನು ತೆಗೆದು ಪರಿಶೀಲಿಸಿದಾಗ 7 ಹುಲಿಯ ಉಗರು ಇರುವ ಮಾಂಸದ ತುಂಡು, ಹಾಗೂ ಒಂದು ಹುಲಿಯ  ದವಡೆ

ಹಲ್ಲಿನ ತುಂಡು ಇರುವುದು ಕಂಡು ಬಂದಿರುತ್ತದೆ. ತನಿಖಾದಿಕಾರಿಗಳು ಮಹಜರ್ ಮಾಡಿ ಅಮಾನತುಪಡಿಸಿರುತ್ತಾರೆ. ನಂತರ ಮಹೇಶ್ ಕುಮಾರ್ ರವರು ಚಾಸಾ 8 ರವರ ನೇತೃತ್ವದಲ್ಲಿ 4ನೇ ಆರೋಪಿಯಾದ ತಮ್ಮ ಮನೆಯನ್ನು ಪರಿಶೀಲಿಸಲು ಶ್ವಾನದೊಂದಿಗೆ ಹೋಗಲು ತಿಳಿಸಿರುತ್ತಾರೆ. ಅದರಂತೆ ದಿ. 27.08.2020 ರಂದು ಶ್ವಾನದೊಂದಿಗೆ ಮನೆಗೆ ಬಂದಿರುತ್ತೇವೆ. ಮನೆಯ store room ನಲ್ಲಿ Amul spray milk powder ಡಬ್ಬದಲ್ಲಿ ಒಂದು special company red colour empty cartridge, ಒಂದು ಕಬ್ಬಿಣದ ಸುತ್ತಿಗೆ, 7 ಸಂಖ್ಯೆಯ ಕಬ್ಬಿಣದ ತುಂಡುಗಳು ಇತ್ತು. ಅಂದಾಜು 150 ಗ್ರಾಂ ಚಿಲ್ಸ್ ಗಳು ಇದ್ದವು. ನಂತರ ಕೊಠಡಿಯ cadboard ಅನ್ನು ಪರಿಶೀಲಿಸಿದಾಗ Shaktiman express company 3 red colour empty cartridge, one white colour empty cartridgeಇತ್ತು. ಮನೆ ಸುತ್ತ ಶ್ವಾನದೊಂದಿಗೆ ಪರಿಶೀಲಿಸಿದಾಗ ಪರಂಗಿ ಹಣ್ಣಿನ ಮರದ ಕೆಳಗಡೆ ಹುಲಿಯ ಪಾದದ 3 ಮಾಂಸದ ತುಂಡುಗಳು ದೊರಕಿರುತ್ತದೆ. ಅವುಗಳನ್ನು ತನಿಖಾದಿಕಾರಿ ಅಮಾನತುಪಡಿಸಿರುತ್ತಾರೆ ಎಂದು ಸಾಕ್ಷ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

**ಪ್ರಶ್ನೆ ಸಂಖ್ಯೆ-22** ಪ್ರಾ.ಸಾ.13/ಚಾ.ಸಾ.15 ಕುಮಾರಸ್ವಾಮಿ ಅವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿನಾಂಕಃ- 27.08.2020 ರಂದು 1ನೇ ಆರೋಪಿಯಾದ ನೀವು ನೀಡಿದ ಸುಳಿವಿನ ಮೇರೆಗೆ ಬಾಳೆಲೆ ಹೋಬಳಿ ತಟ್ಟೆಕೆರೆ ಸೂಳುಗೋಡು ಗ್ರಾಮದ ಸರ್ವೆ ನಂ.119/1 ರ 3ನೇ ಆರೋಪಿಯ ವಾಸದ ಮನೆ ಕಾಫಿ ತೋಟದ ಆವರಣದಲ್ಲಿ ಚಾಸಾ 2, 7, ಎಸ್.ಟಿ.ಪಿ.ಎಫ್ ಸಿಬ್ಬಂದಿಗಳು ಶ್ವಾನ ದಳ ಸಿಬ್ಬಂದಿಯೊಂದಿಗೆ ಮ. 12 ಗಂಟೆಗೆ ಹೋಗಿ ಮನೆಯನ್ನು ಪರಿಶೀಲಿಸಿರುತ್ತಾರೆ. ಮನೆಯ ಒಳಗಡೆ ಇದ್ದ ಬೀರುವಿನಲ್ಲಿ ಚಿಲ್ಸಳು ಪ್ಲಾಸ್ಟಿಕ್ ಕವರ್ ನಲ್ಲಿ ಇದ್ದವು. ಪ್ಲಾಸ್ಟಿಕ್ ಬುಟ್ಟಿಯಲ್ಲಿ 2 ಖಾಲಿ ಕೆಂಪು ಬಣ್ಣದ ಕಾಡುತೂಸುಗಳು ಇದ್ದವು. ಬ್ಯಾಗ್ ನಲ್ಲಿ ಪ್ಲಾಸ್ಟಿಕ್ ಕವರ್ ನಲ್ಲಿ ಸಣ್ಣ ಸಣ್ಣ ಚಿಲ್ಸ್ ಗಳು ಇದ್ದು. ಒಂದು ಮಚ್ಚು ಇತ್ತು. ಈ ಬಗ್ಗೆ ಮನೆಯ ಸದಸ್ಯರನ್ನು ಕೇಳಿದಾಗ ಬಂದೂಕು ಪರವಾನಗಿ ಇಲ್ಲ ಎಂದು ತಿಳಿಸಿರುತ್ತಾರೆ. ಮೇಲ್ಕಂಡ ಎಲ್ಲ ವಸ್ತುಳನ್ನು ಚಾಸಾ 2 ರವರು ಮಹಜರ್ ಮಾಡಿ ಅಮಾನತುಪಡಿಸಿರುತ್ತಾರೆ ಎಂದು ನುಡಿದಿರುತ್ತಾರೆ ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

**ಪ್ರಶ್ನೆ ಸಂಖ್ಯೆ-23** ಪ್ರಾ.ಸಾ.13/ಚಾ.ಸಾ.15 ರವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ನುಡಿಯುತ್ತಾ, ಶ್ವಾನದಳದೊಂದಿಗೆ ಮನೆಯ ಸುತ್ತ ಪರಿಶೀಲಿಸಿದಾಗ ಮನೆಯ ಹಿಂಭಾಗ ತೋಟದಲ್ಲಿ ಪ್ಲಾಸ್ಟಿಕ್ ಕವರ್ಅನ್ನು ನೆಲದಲ್ಲಿ ಹೂತಿದ್ದು ಅರ್ಧ ಭಾಗ ಮೇಲೆ ಕಾಣುತ್ತಿತ್ತು ಅದನ್ನು ತೆಗೆದು ನೋಡಿದಾಗ ಪ್ರಾಣಿಯ ಕೂದಲುಗಳು ಕಾಣುತ್ತಿತ್ತು. 7 ಮಾಂಸದ ತುಂಡುಗಳು ಉಗುರು ಸಮೇತ ಇತ್ತು. ಒಂದು ದವಡೆ ಹಲ್ಲು ಇತ್ತು. ಅವುಗಳನ್ನು

ಪರಿಶೀಲಿಸಿದಾಗ ಅವು ಹುಲಿಯ ಉಗುರುಗಳು ಎಂಬುದು ನಮಗೆ ತಿಳಿದಿರುತ್ತದೆ. ನಂತರ ಮನೆಯ ಹಿತ್ತಲಿನಲ್ಲಿ ಒಂದು ಮೇಲ್ಭಾಗ ಖಾಕಿ ಬಣ್ಣ ಸ್ವೆಟರ್ ಹಾಗೂ ಒಳ ಭಾಗ ಕಪ್ಪು ಬಣ್ಣದಿಂದ ಕೂಡಿತ್ತು, ಅದರಲ್ಲಿ ಪ್ರಾಣಿಯ ಸಣ್ಣ ಸಣ್ಣ ಕೂದಲುಗಳು ಕಂಡು ಬಂದಿದ್ದು, ಅವುಗಳನ್ನು ತನಿಖಾಧಿಕಾರಿ ಮಹಜರ್ ಮಾಡಿ ಅಮಾನತ್ತು ಪಡಿಸಿರುತ್ತಾರೆ. ದಿ. 01.09.2020 ರಂದು ನಿಟ್ಟುರೂ ನ್ಯಾವಲೆ ಗ್ರಾಮ ವಿಶ್ವನಾಥ್‌ರವರ ಕಾಫಿ ತೋಟಕ್ಕೆ ತಾನು, 4ನೇ ಆರೋಪಿ ಚಾಸಾ 12, 8, ಇಲಾಖಾ ಸಿಬ್ಬಂದಿ ಹೋಗಿರುತ್ತೇವೆ. ಹುಲಿಯ ಉಗುರುಗಳನ್ನು 4ನೇ ಆರೋಪಿಯಾದ ನೀವು ತೋರಿಸುತ್ತೇನೆ ಎಂದು ಹೇಳಿ ತಮ್ಮ ಮನೆಗೆ ಕರೆದುಕೊಂಡು ಹೋಗಿರುತ್ತೀರಿ. ತಮ್ಮ ಮನೆಯ ಮುಂಭಾಗ ಕಾಫಿ ಮತ್ತು ಅಡಿಕೆ ತೋಟ ಇದ್ದು, ಅಡಿಕೆ ಗರಿಗಳನ್ನು ಮುಚ್ಚಿದ್ದ ರಾಶಿಯ ಬಳಿ 4ನೇ ಆರೋಪಿಯಾದ ನೀವು ಕರೆದುಕೊಂಡು ಹೋಗಿದ್ದು ಅಲ್ಲಿ ಸದರಿ ಅಡಿಕೆ ಗರಿಗಳನ್ನು ಸರಿಸಿ ನೋಡಿದಾಗ ಪ್ಲಾಸ್ಟಿಕ್ ಕವರ್ ನಲ್ಲಿ 2 ಹುಲಿಯ ಕೋರೆ ಹಲ್ಲುಗಳು ಹಾಗೂ 4 ಹುಲಿಯ ಉಗುರುಗಳು ಕಂಡು ಬಂದಿರುತ್ತದೆ. ತನಿಖಾಧಿಕಾರಿಗಳು ಮಹಜರ್ ಮಾಡಿ ಅಮಾನತುಪಡಿಸಿರುತ್ತಾರೆ. ದಿ. 04.09.2020 ರಂದು ಆರೋಪಿತರಾದ ತಮ್ಮೊಂದಿಗೆ ಹಾಗೂ ಈ ಪ್ರಕರಣದಲ್ಲಿ ಅಮಾನತುಪಡಿಸಿದ ವಸ್ತುಗಳೊಂದಿಗೆ ವಲಯ ಕಚೇರಿ ಬಳಿ ತಾನು ಫೋಟೋ ತೆಗೆದಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

**ಪ್ರಶ್ನೆ ಸಂಖ್ಯೆ-24** ಪ್ರಾ.ಸಾ.14/ಚಾ.ಸಾ.21 ಕೆ.ಪಿ.ಗೋಪಾಲ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿಃ05.10.2020 ರಂದು ನಾಗರಹೊಳೆ ಸಹಾಯಕ ಸಂರಕ್ಷಾಧಿಕಾರಿಯಾಗಿ ಪ್ರಭಾರವನ್ನು ವಹಿಸಿಕೊಂಡಿರುತ್ತೇನೆ, ಆ ಸಮಯದಲಿಲ ಸಹಾಯಕ ಸಂರಕ್ಷಣಾಧಿಕಾರಿಯಾಗಿದ್ದ ಚಾ.ಸಾ.20 ರವರ ಕಡೆಯಿಂದ ಕಡತವನ್ನು ಪಡೆದುಕೊಂಡಿರುತ್ತೇನೆ. ಚಾ.ಸಾ.20 ರವರು ತನಿಖೆಯನ್ನು ಪೂರ್ಣಗೊಳಿಸಿರುತ್ತಾರೆ. ದಿಃ19.10.2020 ರಂದು ಕೃತ್ಯ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿರುತ್ತಾರೆ. ನಂತರ ಪ್ರಕರಣಕ್ಕೆ ಸಂಬಂಧಿಸಿದ ದಾಖಲಾತಿಗಳು, ಮಹಜರ್ ಸಾಕ್ಷಿಗಳ ಹೇಳಿಕೆಗಳನ್ನು ಹಾಗೂ ಆರೋಪಿತರಾದ ತಮ್ಮ ಹೇಳಿಕೆಗಳನ್ನು ಪಡೆದಿರುತ್ತಾರೆ. ನಂತರ ದಿಃ02.11.2020 ರಂದು ಆರೋಪಿತರಾದ ತಮ್ಮ ವಿರುದ್ಧ ಆರೋಪಿ ಸಾಬೀತಾದ ಕಾರಣ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ. ದಿಃ16.06.2021 ರಂದು ಪ್ರಕರಣಕ್ಕೆ ಸಂಬಂಧಿಸಿದಂತೆ ಸಿ.ಸಿ.ಎಂ.ಬಿ ಹೈದರಾಬಾದ್ ಕಡೆಯಿಂದ ಎಫ್.ಎಸ್.ಎಲ್ ವರದಿಯನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಹೆಚ್ಚುವರಿ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

**ಪ್ರಶ್ನೆ ಸಂಖ್ಯೆ-25** ಪ್ರಾ.ಸಾ.15/ಚಾ.ಸಾ.22 ಡಾಃಮುಜಿಬರ್ ರೆಹಮಾನ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿಃ26.08.2020 ರಂದು ಅವರು ಗಂಡು ಹುಲಿಯ ಮರಣೋತ್ತರ ಪರೀಕ್ಷೆಯನ್ನು ನಡೆಸಿರುತ್ತಾರೆ. ಮೃತ ಹುಲಿಯನ್ನು ಪರೀಕ್ಷಿಸಿದಾಗ ಹುಲಿಯ ಕೆಲವು

ಅಂಗಾಂಗಗಳು ನಾಪತ್ತೆ ಅಗಿರುವುದು ಕಂಡು ಬಂದಿರುತ್ತದೆ. ಮೃತ ಹುಲಿಯ ದೇಹದಲ್ಲಿ ಕಬ್ಬಿಣದ ಬಾಲ್ಸ್‌ಗಳು ಪತ್ತೆ ಆಗಿರುತ್ತವೆ. ಮೆಲ್ದವಡೆ ಹಾಗೂ ಕೆಳದವಡೆ ಕೋರೆ ಹಲ್ಲುಗಳು ನಾಪತ್ತೆ ಆಗಿರುತ್ತವೆ. ಚರ್ಮದ ತುಂಡು ಹಾಗೂ ಕೆಲವೊಂದು ಮಾಂಸದ ತುಂಡುಗಳನ್ನು ಮುಂದಿನ ತನಿಖೆಗಾಗಿ ಸಿ.ಸಿ.ಎಂ.ಬಿ ಹೈದರಬಾದ್ ಅಲ್ಲಿಗೆ ಕಳಿಸಲಾಗಿರುತ್ತದೆ. ನಂತರ ಅವರಿಂದ ಬಂದ ವರದಿಯನ್ನು ಸಹ ತನಿಖಾಧಿಕಾರಿಗಳಿಗೆ ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

**ಪ್ರಶ್ನೆ ಸಂಖ್ಯೆ-26** ಪ್ರಾ.ಸಾ.16/ಚಾ.ಸಾ.16 ಕಿರಣ್‌ಕುಮಾರ್ ವೈ.ಕೆ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿಃ26.08.2020 ರಂದು ಚಾ.ಸಾ.20 ರವರು ತನಗೆ ಮೌಖಿಕವಾಗಿ ಆದೇಶ ನೀಡಿದಂತೆ 2ನೇ ಮತ್ತು 3ನೇ ಆರೋಪಿಗಳು ಸೇರಿ ಓಡಿ ಹೋಗಲು ಉಪಯೋಗಿಸಿದ ಬಜಾಜ್ ಬೈಕ್ ಕೆಎ.51.ಕೆ.671 ವಾಹನವನ್ನು ಪೂವಯ್ಯರವರ ಮನೆಯ ಹತ್ತಿರ ನಿಲ್ಲಿಸಿದ್ದಾರೆ ಎಂದು 2ನೇ ಆರೋಪಿಯಾದ ನೀವು ತಮ್ಮ ಸ್ವಇಚ್ಛಾ ಹೇಳಿಕೆಯಲ್ಲಿ ತಿಳಿಸಿದ ಮೇರೆಗೆ ತಿತಿಮತಿಯಲ್ಲಿರುವ ಪೂವಯ್ಯರವರ ಮನೆಯ ಹತ್ತಿರ ಹೋರಿ ಅದನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ ಎಂದು ಸಾಕ್ಷ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

**ಪ್ರಶ್ನೆ ಸಂಖ್ಯೆ -27 :** ಈ ಪ್ರಕರಣದಲ್ಲಿ ನಿಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ ಅಥವಾ ದಾಖಲಾತಿ ಹಾಜರುಪಡಿಸಲು ಬಯಸುವಿರಾ?

ಉತ್ತರಃ ಇಲ್ಲ

**ಪ್ರಶ್ನೆ ಸಂಖ್ಯೆ - 28 :** ಈ ಪ್ರಕರಣದಲ್ಲಿ ನೀವೇನಾದರೂ ಹೇಳಬಯಸುವಿರಾ?

ಉತ್ತರಃ ಇಲ್ಲ

(ತೆರೆದ ನಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ವಿವರಿಸಿದ ನಂತರ ಆತನು ನೀಡಿದ ಉತ್ತರಗಳನ್ನು ದಿಃ02-07-2025 ರಂದು ನನ್ನಿಂದ ದಾಖಲು ಮಾಡಿಕೊಳ್ಳಲಾಯಿತು).

**ಸ್ಥಳಃ ಪೊನ್ನಂಪೇಟೆ**
**ದಿಃ02.07.2025.**

**ಶ್ರೀ ಶ್ರೀನಾಥ್ ಎ**
**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.**
**ಪೊನ್ನಂಪೇಟೆ.**